ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಗುರುವಾರ ಲಖನೌ ಸೂಪರ್ ಜೈಂಟ್ಸ್ ವಿರುದ್ಧ ನಡೆಯುತ್ತಿರುವ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ನಡೆಸಿ ರುವ ಕೋಲ್ಕತ್ತ ನೈಟ್ ರೈಡರ್ಸ್ ನಿಗದಿತ 20 ಓವರ್‌ಗಳಲ್ಲಿ ನಾಲ್ಕು ವಿಕೆಟ್ ನಷ್ಟಕ್ಕೆ 180 ರನ್‌ಗಳ ಸವಾಲಿನ ಮೊತ್ತ ಪೇರಿಸಿತು.

10 ಏಪ್ರಿಲ್ 2026 ಶುಕ್ರವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 31 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಸಕಲೇಶಪುರದಲ್ಲಿ ಶಿವಕುಮಾರ ಸ್ವಾಮೀಜಿ ಪುಣ್ಯ ಸ್ಮರಣೆ 2



ಸಿಲಿಂಡರ್‌ಗಳ ದಾಸ್ತಾನು ಲಭ್ಯ : ಅನಗತ್ಯ ಬುಕಿಂಗ್ ಬೇಡ » 3



ಪಶ್ಚಿಮ ಬಂಗಾಳದಲ್ಲಿ 90 ಲಕ್ಷಕ್ಕೂ ಹೆಚ್ಚು ಜನರ ಹೆಸರನ್ನು ಮತದಾರರ ಪಟ್ಟಿಯಿಂದ ಬಿಜೆಪಿ ಅಳಿಸಿ ಹಾಕಿಸಿದೆ ಎಂದು ಮಮತಾ ಬ್ಯಾನರ್ಜಿ ಆರೋಪಿಸಿದ್ದಾರೆ.

# ಉಪ ಕದನ : ಶಾಂತಿಯುತ ಮತದಾನ

## ಬಾಗಲಕೋಟೆ, ದಾವಣಗೆರೆಯಲ್ಲಿ ಶೇ.68 ರಷ್ಟು ಹಕ್ಕು ಚಲಾವಣೆ

• ಪ್ರಜೋದಯ ವರದಿ

**ಬೆಂಗಳೂರು:** ಬಾಗಲಕೋಟೆ, ದಾವಣಗೆರೆ ದಕ್ಷಿಣ ಕ್ಷೇತ್ರಗಳ ಉಪ ಚುನಾವಣೆಯ ಮತದಾನ ಪ್ರಕ್ರಿಯೆ ಗುರುವಾರ ಶಾಂತಿಯುತವಾಗಿ ನಡೆಯಿತು. ಬಾಗಲಕೋಟೆಯಲ್ಲಿ ಶೇ. 68.74 ಹಾಗು ದಾವಣಗೆರೆ ದಕ್ಷಿಣದಲ್ಲಿ ಶೇ.68.43 ರಷ್ಟು ಮತದಾನ ದಾಖಲಾಗಿದೆ.

ಆಡಳಿತಾರೂಢ ಕಾಂಗ್ರೆಸ್ ಎರಡೂ ಸ್ಥಾನಗಳನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರೆ ಬಿಜೆಪಿ ಅವುಗಳನ್ನು ವಶಪಡಿಸಿಕೊಳ್ಳುವ ಮತ್ತು ನಾಯಕತ್ವಕ್ಕಾಗಿ ಆಂತರಿಕ ಹೋರಾಟದಲ್ಲಿ ಮುಳುಗಿರುವ ತನ್ನ ಪ್ರತಿಸ್ಪರ್ಧಿಗೆ ಹಿನ್ನಡೆಯನ್ನುಂಟು ಮಾಡುವ ಗುರಿಯನ್ನು ಹೊಂದಿದೆ.

ಬಾಗಲಕೋಟೆಯ ಸುಮಾರು 319 ಮತಗಟ್ಟೆಗಳಲ್ಲಿ ಒಟ್ಟು 2.59 ಲಕ್ಷಕ್ಕೂ ಹೆಚ್ಚು ಅರ್ಹ ಮತದಾರರಿದ್ದು, ಒಂಬತ್ತು ಅಭ್ಯರ್ಥಿಗಳು ಕಣದಲ್ಲಿದ್ದರು. ದಾವಣಗೆರೆ ದಕ್ಷಿಣದಲ್ಲಿ 284 ಮತಗಟ್ಟೆಗಳಲ್ಲಿ 2.31 ಲಕ್ಷಕ್ಕೂ ಹೆಚ್ಚು ಅರ್ಹ ಮತದಾರರಿದ್ದು, 25 ಅಭ್ಯರ್ಥಿಗಳು ಸ್ಪರ್ಧಿಸಿದ್ದರು. ಬಿಜೆಪಿ ಯಿಂದ ಮಾಜಿ ಶಾಸಕ ವೀರಣ್ಣ ಚಿರಂತಿಮಠ ಮತ್ತು ದಾವಣಗೆರೆ ದಕ್ಷಿಣದಿಂದ ಶ್ರೀನಿವಾಸ್ ಟಿ. ದಾಸಕರಿಯಪ್ಪ ಅವರನ್ನು ಕಣಕ್ಕಿಳಿಸಿದೆ. ಕಾಂಗ್ರೆಸ್ ಎರಡೂ ಕ್ಷೇತ್ರಗಳಲ್ಲಿ ದಿವಂಗತ ಶಾಸಕರ ಕುಟುಂಬ ಸದಸ್ಯರಿಗೆ ಟಿಕೆಟ್ ನೀಡಿದೆ. ಬಾಗಲಕೋಟೆ ಅಭ್ಯರ್ಥಿ ಉಮೇಶ್ ಮೇಟಿ ಹೆಚ್.ವೈ.ಮೇಟಿ ಅವರ ಪುತ್ರರಾಗಿದ್ದರೆ, ದಾವಣಗೆರೆ ದಕ್ಷಿಣದ ಅಭ್ಯರ್ಥಿ ಸಮರ್ಥ ಮಲ್ಲಿಕಾರ್ಜುನ್ ಶಾಮನೂರು ಶಿವಶಂಕರಪ್ಪ ಅವರ ಮೊಮ್ಮಗ ಆಗಿದ್ದಾರೆ.



ದಾವಣಗೆರೆಯಲ್ಲಿ ಮತದಾನ ಕೊನೆಯ ಘಳಿಗೆಯಲ್ಲಿ ಮೆಹಬೂಬ್ ನಗರದ ಮಿಲ್ಲತ್ ಕಾಲೇಜು ಬಳಿ ಬಿಜೆಪಿ ಹಾಗು ಪೊಲೀಸರ ನಡುವೆ ಹೈಡ್ರಾಮಾ ನಡೆದಿದೆ. ಕೊನೆ ಕ್ಷಣದಲ್ಲಿ ಮತ ಹಾಕಲು ಬಂದು ಮತಗಟ್ಟೆ ಗೇಟ್ ಹೊರಗೆ ಹಲವರು ನಿಂತಿದ್ದರು. ಆದರೆ, ಚುನಾವಣಾಧಿಕಾರಿ ಮತಗಟ್ಟೆ ಗೇಟ್ ಒಳಗೆ ಇದ್ದವರಿಗೆ ಮಾತ್ರ ಮತದಾನಕ್ಕೆ ಅವಕಾಶ ಮಾಡಿಕೊಟ್ಟರು. ಇದರಿಂದ ಗೊಂದಲ ಏರ್ಪಟ್ಟಿತ್ತು. ದಾವಣಗೆರೆಯ ಬಾಷಾನಗರದ ಮತಗಟ್ಟೆಯ ಹೊರಗೆ ಟೇಬಲ್ ಹಾಕಿದ್ದ ವಿಚಾರಕ್ಕೆ ಕಾಂಗ್ರೆಸ್ ಮತ್ತು ಬಿಜೆಪಿ ಕಾರ್ಯಕರ್ತರ ನಡುವೆ ವಾಗ್ವಾದ ನಡೆಯಿತು. ನಂತರ ಪೊಲೀಸರು ಹರಸಾಹಸ ಪಟ್ಟು ಪರಿಸ್ಥಿತಿ ನಿಯಂತ್ರಿಸಿದರು.

ಬಾಗಲಕೋಟೆಯ ನವನಗರದ ವಾಂಬೆ ಕಾಲೋನಿಯಲ್ಲಿ ಮತದಾರರಿಗೆ ಹಣ ಹಂಚಿಕೆ ಮಾಡಲಾಗುತ್ತಿದೆ ಎಂಬ ಆರೋಪ ಕೇಳಿ ಬಂದಿದೆ. ಕಾಂಗ್ರೆಸ್ ಪಕ್ಷದವರು ತಮಗೆ ತಲಾ 500 ರೂಪಾಯಿ ನೀಡಿದ್ದಾರೆಂದು ಮಹಿಳೆಯೊಬ್ಬರು ನೋಟು ಪ್ರದರ್ಶಿಸುತ್ತಿರುವ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಇದೇ ವೇಳೆ, ಹಣ ಹಂಚಲು ಬಂದಿದ್ದಾರೆಂದು ಆರೋಪಿಸಿ ಕಾಂಗ್ರೆಸ್ ಮುಖಂಡ ಸಂತೋಷ್ ಎಂಬುವವರ ಕಾರಿಗೆ ಸ್ಥಳೀಯರು ಮುತ್ತಿಗೆ ಹಾಕಿದ್ದಾರೆ. ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಸ್ಥಿತಿ ತಿಳಿಗೊಳಿಸಿದರು.

### ಕೇರಳ, ಅಸ್ಸಾಂ, ಪುದುಚೇರಿ ಚುನಾವಣೆ

ಕೇರಳ, ಅಸ್ಸಾಂ, ಪುದುಚೇರಿಯಲ್ಲಿ ಗುರುವಾರ ವಿಧಾನಸಭಾ ಚುನಾವಣೆಗೆ ಮತದಾನ ನಡೆದಿದೆ. ಕೇರಳದ 140, ಅಸ್ಸಾಂನಲ್ಲಿ 126 ಮತ್ತು ಪುದುಚೇರಿಯ 30 ಸ್ಥಾನಗಳಿಗೆ ಬೆಳಿಗ್ಗೆ 7 ರಿಂದ ಸಂಜೆಯವರೆಗೆ ಮತದಾನ ನಡೆದಿದೆ. ಕೇರಳದಲ್ಲಿ 2.71 ಕೋಟಿ ಮತದಾರರು 883 ಅಭ್ಯರ್ಥಿಗಳ ಭವಿಷ್ಯವನ್ನು ನಿರ್ಧರಿಸಲಿದ್ದಾರೆ. ಇದರಲ್ಲಿ 1.32 ಕೋಟಿ ಪುರುಷರು, 1.39 ಕೋಟಿ ಮಹಿಳೆಯರು ಮತ್ತು 273 ಟ್ರಾನ್ಸ್ ಜೆಂಡರ್ ಮತದಾರರು ಸೇರಿದ್ದಾರೆ. ಅಸ್ಸಾಂನಲ್ಲಿ ಒಟ್ಟು 2.50 ಕೋಟಿ ಮತದಾರರಿದ್ದು, ಅವರು 31,490 ಮತಗಟ್ಟೆಗಳಲ್ಲಿ ತಮ್ಮ ಮತ ಚಲಾಯಿಸಲಿದ್ದಾರೆ. ಮೇ 4 ರಂದು ಮತ ಎಣಿಕೆ ನಡೆಯಲಿದೆ.

# ಪಿಯುಸಿ ಫಲಿತಾಂಶ: ಜಿಲ್ಲೆಗೆ 11ನೇ ಸ್ಥಾನ

■ 14,577 ವಿದ್ಯಾರ್ಥಿಗಳ ಪೈಕಿ 13,077 ಮಂದಿ ಉತ್ತೀರ್ಣ

• ಪ್ರಜೋದಯ ವರದಿ

**ಹಾಸನ:** ದ್ವಿತೀಯ ಪಿಯುಸಿ ಪರೀಕ್ಷೆ ಫಲಿತಾಂಶದಲ್ಲಿ ಜಿಲ್ಲೆ 11ನೇ ಸ್ಥಾನ ಪಡೆದುಕೊಳ್ಳುವ ಮೂಲಕ ಕಳೆದ ವರ್ಷಕ್ಕಿಂತ ಒಂದು ಸ್ಥಾನ ಕುಸಿತ ಕಂಡಿದೆ.

ಜಿಲ್ಲೆಯಲ್ಲಿ ಒಟ್ಟು 14,577 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, ಅದರಲ್ಲಿ 13,077 ಮಂದಿ ಉತ್ತೀರ್ಣರಾಗಿದ್ದಾರೆ. ಈ ಮೂಲಕ ಜಿಲ್ಲೆಗೆ ಶೇ. 89.71 ರಷ್ಟು ಫಲಿತಾಂಶ ಬಂದಿದೆ. ನಗರದ ಎಪಿಜೆ ಪಿಯು ಕಾಲೇಜಿನ ಹೆಚ್.ಜಿ.ಅರ್ಪಿತ 597 ಅಂಕ ಪಡೆದು ಜಿಲ್ಲೆಗೆ ಪ್ರಥಮ ಸ್ಥಾನ ಗಳಿಸಿಕೊಂಡಿದ್ದಾಳೆ. ಕಳೆದ ವರ್ಷ 10ನೇ ಸ್ಥಾನ ಪಡೆದುಕೊಳ್ಳುವ ಮೂಲಕ ಶೇ.77.56 ರಷ್ಟು ಫಲಿತಾಂಶ ಬಂದಿತ್ತು. ಈ ಬಾರಿ 11ನೇ ಸ್ಥಾನಕ್ಕೆ ತೃಪ್ತಿ ಪಟ್ಟಿಕೊಳ್ಳಬೇಕಾಗಿದೆ. 2024ನೇ ಸಾಲಿನಲ್ಲಿ 13ನೇ ಸ್ಥಾನದಲ್ಲಿತ್ತು.

ಪರೀಕ್ಷೆ ಬರೆದ ಒಟ್ಟು 8,908 ಬಾಲಕಿಯಲ್ಲಿ 7917 (ಶೇ.88.88) ಉತ್ತೀರ್ಣರಾಗಿದ್ದಾರೆ. 6651 ಬಾಲಕರ ಪೈಕಿ 5,496 (ಶೇ.82.63) ಮಂದಿ ಉತ್ತೀರ್ಣರಾಗಿದ್ದಾರೆ. ಆ ಮೂಲಕ ಈ ಬಾರಿಯೂ ಹೆಣ್ಣು ಮಕ್ಕಳೇ ಮೇಲುಗೈ ಸಾಧಿಸಿದ್ದಾರೆ.

ಈ ಬಾರಿ ಹೊಸದಾಗಿ ಪರೀಕ್ಷೆ ತೆಗೆದುಕೊಂಡ 14,577 ವಿದ್ಯಾರ್ಥಿಗಳ ಪೈಕಿ 13,077 ಮಂದಿ ಉತ್ತೀರ್ಣರಾಗಿದ್ದಾರೆ. (ಶೇ.89.71). ಅದೇ ರೀತಿ 718 ಪುನರಾವರ್ತಿತರಲ್ಲಿ 209 ಜನರು ತೇರ್ಗಡೆಗೊಂಡಿದ್ದಾರೆ (ಶೆ.29.11). ಖಾಸಗಿಯಾಗಿ 264 ಮಂದಿ ಪರೀಕ್ಷೆ ತೆಗೆದುಕೊಂಡಿದ್ದು, ಅವರಲ್ಲಿ 127 ಮಂದಿ (ಶೇ.48.11) ಪಾಸ್ ಆಗಿದ್ದಾರೆ.

**ವಿಜ್ಞಾನ ವಿಭಾಗದ ಸಾಧನೆ**

ಕಲಾ ವಿಭಾಗದ 2,500 ವಿದ್ಯಾರ್ಥಿಗಳಲ್ಲಿ 1,967 ಮಂದಿ ಉತ್ತೀರ್ಣರಾಗುವ ಮೂಲಕ ಶೇ.78.68 ರಷ್ಟು ಫಲಿತಾಂಶ ಬಂದಿದೆ. ವಾಣಿಜ್ಯ ವಿಭಾಗದ 5,249 ಮಂದಿಯಲ್ಲಿ 4,685 ವಿದ್ಯಾರ್ಥಿಗಳು ತೇರ್ಗಡೆಯಾಗಿ ಶೇ.89.26ರಷ್ಟು ಫಲಿತಾಂಶ ಬಂದಿದೆ. ವಿಜ್ಞಾನ ವಿಭಾಗದ 6828 ವಿದ್ಯಾರ್ಥಿಗಳಲ್ಲಿ 6425 (ಶೇ.94.1) ರಷ್ಟು ವಿದ್ಯಾರ್ಥಿಗಳು ಯಶಸ್ಸು ಕಂಡಿದ್ದಾರೆ. ಕಲಾ ಮತ್ತು ವಾಣಿಜ್ಯ ವಿಭಾಗಕ್ಕೆ ಹೋಲಿಕೆ ಮಾಡಿದರೆ ವಿಜ್ಞಾನ ವಿಭಾಗದಿಂದಲೇ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ತೆಗೆದುಕೊಂಡಿದ್ದು, ಹೆಚ್ಚಿನ ಸಂಖ್ಯೆ ಯಲ್ಲಿಯೂ ಉತ್ತೀರ್ಣರಾಗಿದ್ದಾರೆ. ಕಲಾ ವಿಭಾಗದ ಶೇ.22ರಷ್ಟು ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದಾರೆ.

ನಗರದ ಪ್ರದೇಶದ 9,781 ವಿದ್ಯಾರ್ಥಿಗಳಲ್ಲಿ 8,820 (ಶೇ.90.17) ರಷ್ಟು ಹಾಗು ಗ್ರಾಮೀಣ ಭಾಗದ 4,796 ಜನರಲ್ಲಿ 4257 (ಶೇ.76) ಮಂದಿ ತೇರ್ಗಡೆಯಾಗಿದ್ದಾರೆ. ಈ ಬಾರಿ ನಗರ ಪ್ರದೇಶದ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ.

ಜಿಲ್ಲೆಯ ಸರ್ಕಾರಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಈ ಬಾರಿ ಉತ್ತಮ ಸಾಧನೆ ತೋರಿದ್ದಾರೆ. ಸರ್ಕಾರಿ ಕಾಲೇಜುಗಳು ಫಲಿತಾಂಶದಲ್ಲಿ ಹಾಸನ ಜಿಲ್ಲೆ ರಾಜ್ಯದಲ್ಲೇ 9ನೇ ಸ್ಥಾನ ಪಡೆದುಕೊಂಡಿವೆ. ಜಿಲ್ಲೆಯಲ್ಲಿ ಒಟ್ಟು 4,600 ಸರ್ಕಾರಿ ಕಾಲೇಜಿನಲ್ಲಿ ಅಭ್ಯಾಸ ಮಾಡಿದ ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, ಆ ಪೈಕಿ 3,765 (ಶೇ.81.85) ರಷ್ಟು ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. ಮೊದಲ ಸ್ಥಾನದಲ್ಲಿ ದಕ್ಷಿಣ ಕನ್ನಡ, 2ನೇ ಸ್ಥಾನದಲ್ಲಿ ಉಡುಪಿ, ಮೂರನೇ ಸ್ಥಾನದಲ್ಲಿ ಉತ್ತರ ಕನ್ನಡದ ಸರ್ಕಾರಿ ಕಾಲೇಜುಗಳು ಸ್ಥಾನ ಪಡೆದುಕೊಂಡಿವೆ.

> **"ಜಿಲ್ಲೆಯಲ್ಲಿ ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಸರಾಸರಿ ಶೇ.12.5 ಫಲಿತಾಂಶ ಏರಿಕೆಯಾಗಿದೆ. ಅನುತ್ತೀರ್ಣರ ಸಂಖ್ಯೆಯೂ ಗಣನೀಯವಾಗಿ ಕಡಿಮೆಯಾಗಿದೆ. ಮುಂದಿನ ಪೂರಕ ಪರೀಕ್ಷೆಯಲ್ಲಿ ಹೆಚ್ಚಿನ ವಿದ್ಯಾರ್ಥಿಗಳು ಉತ್ತೀರ್ಣರಾಗುವ ಮೂಲಕ ಉತ್ತಮ ಫಲಿತಾಂಶ ನಿರೀಕ್ಷೆ ಮಾಡಿದ್ದೇವೆ.**
> **- ಕೆ.ಪಿ.ಗಂಗಾಧರ್, ಉಪನಿರ್ದೇಶಕ ಪದವಿ ಪೂರ್ವ ಶಿಕ್ಷಣ ಇಲಾಖೆ**

## ಹೆಚ್.ಜಿ.ಅರ್ಪಿತ ಜಿಲ್ಲೆಗೆ ಪ್ರಥಮ, ರಾಜ್ಯಕ್ಕೆ ತೃತೀಯ



**ಹಾಸನ:** ದ್ವಿತೀಯ ಪಿಯು ಪರೀಕ್ಷೆಯಲ್ಲಿ ನಗರದ ಎಪಿಜೆ ಪಿಯು ಕಾಲೇಜಿನ ಹೆಚ್.ಜಿ.ಅರ್ಪಿತ ಅವರು 597 ಅಂಕ ಪಡೆದು ರಾಜ್ಯಕ್ಕೆ ತೃತೀಯ ಹಾಗು ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿದ್ದಾರೆ. ಹೆಚ್.ಆರ್. ಗೋಪಾಲಸ್ವಾಮಿ ಮತ್ತು ಎಸ್.ಕೆ. ಮೀನಾಕ್ಷಿ ಅವರ ಪುತ್ರಿ ಅರ್ಪಿತ ಅವರು, ಸಂಸ್ಕೃತ ವಿಷಯದಲ್ಲಿ 100, ರಸಾಯನಶಾಸ್ತ್ರ 100, ಗಣಿತ 100, ಜೀವಶಾಸ್ತ್ರ 100, ಭೌತಶಾಸ್ತ್ರ 99, ಇಂಗ್ಲಿಷ್‌ನಲ್ಲಿ 98 ಅಂಕ ಪಡೆದಿದ್ದಾರೆ.

ಪ್ರಾಂಶುಪಾಲ ವಿ.ರಾಮಣ್ಣ, ಬೋಧಕ ಹಾಗು ಬೋಧಕೇತರ ಸಿಬ್ಬಂದಿ ವಿದ್ಯಾರ್ಥಿ ಸಾಧನೆಗೆ ಮೆಚ್ಚುಗೆ ಸೂಚಿಸಿದ್ದಾರೆ. ಸಂಸ್ಥೆಯ ಸಂಸ್ಥಾಪಕ ಡಿ.ಮುರಳಿ ಅವರು ಮಾತನಾಡಿ, ಪ್ರತಿ ವರ್ಷವೂ ನಮ್ಮ ಕಾಲೇಜು ಅತ್ಯುತ್ತಮ ಫಲಿತಾಂಶ ನೀಡುತ್ತಿದೆ. ಈ ಬಾರಿ ನಮ್ಮ ಕಾಲೇಜಿನ ವಿದ್ಯಾರ್ಥಿ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿರುವುದು ಸಂತಸದ ವಿಷಯ. ಈ ಫಲಿತಾಂಶ ಇತರೆ ವಿದ್ಯಾರ್ಥಿಗಳಿಗೆ ಸ್ಫೂರ್ತಿಯಾಗುತ್ತದೆಂದರು.

## ಅನುತ್ತೀರ್ಣರಾದವರು ಆತಂಕಗೊಳ್ಳದಿರಿ



ದ್ವಿತೀಯ ಪಿಯುಸಿ ಫಲಿತಾಂಶದಲ್ಲಿ ಜಿಲ್ಲೆಗೆ ಉತ್ತಮ ಸ್ಥಾನ ಲಭಿಸಿರುವುದು ಸಂತೋಷ ತಂದಿದ್ದು, ವಿಶೇಷವಾಗಿ ಅರ್ಪಿತ ಎಂಬ ವಿದ್ಯಾರ್ಥಿನಿ ಜಿಲ್ಲೆಗೆ ಪ್ರಥಮ ಸ್ಥಾನ ಗಳಿಸಿರುವುದು ಹೆಮ್ಮೆಯ ವಿಚಾರವೆಂದು ಸಂಸದ ಶ್ರೇಯಸ್ ಪಟೇಲ್ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಉತ್ತೀರ್ಣರಾದ ಎಲ್ಲಾ ವಿದ್ಯಾರ್ಥಿಗಳಿಗೆ ಅಭಿನಂದನೆಗಳು. ಅನುತ್ತೀರ್ಣರಾಗಿರುವ ವಿದ್ಯಾರ್ಥಿಗಳು ಯಾವುದೇ ರೀತಿಯ ಆತಂಕಕ್ಕೆ ಒಳಗಾಗಬಾರದು. ಮುಂಬರುವ ಪೂರಕ ಪರೀಕ್ಷೆಯನ್ನು ಸದುಪಯೋಗ ಪಡಿಸಿಕೊಂಡು ಉತ್ತಮ ತಯಾರಿಯೊಂದಿಗೆ ಯಶಸ್ಸು ಸಾಧಿಸಬಹುದು. ಪೋಷಕರು ಕೂಡ ಮಕ್ಕಳಿಗೆ ಆತ್ಮವಿಶ್ವಾಸವನ್ನು ಹೆಚ್ಚಿಸಬೇಕೆಂದು ಹೇಳಿದರು.

## ಬಿಲ್ ಬಾಕಿ : ಹಾರನಹಳ್ಳಿ ಪಂಚಾಯಿತಿ ಪೀಠೋಪಕರಣ ಜಪ್ತಿ

• ಪ್ರಜೋದಯ ವರದಿ

**ಅರಸೀಕೆರೆ:** ತಾಲ್ಲೂಕಿನ ಹಾರನಹಳ್ಳಿ ಗ್ರಾಮ ಪಂಚಾಯಿತಿಗೆ ಸರಬರಾಜು ಮಾಡಲಾದ ಪೀಠೋಪಕರಣಗಳ ಹಣವನ್ನು ಪಾವತಿಸದ ಹಿನ್ನಲೆಯಲ್ಲಿ ನ್ಯಾಯಾಲಯದ ಆದೇಶದಂತೆ ಗ್ರಾಮ ಪಂಚಾಯಿತಿ ಕಚೇರಿ ಪೀಠೋಪಕರಣಗಳನ್ನು ಜಪ್ತಿ ಮಾಡಲಾಯಿತು.

ತಾಲ್ಲೂಕಿನ ಅಕ್ಷಯ ಎಂಟರ್ ಪ್ರೈಸಸ್ ಸಂಸ್ಥೆ 2016-17ನೇ ಸಾಲಿನಲ್ಲಿ ಹಾರನಹಳ್ಳಿ ಗ್ರಾಮ ಪಂಚಾಯಿತಿಗೆ ಪೀಠೋಪಕರಣಗಳು ಸೇರಿ ವಿವಿಧ ವಸ್ತುಗಳನ್ನು ಸರಬರಾಜು ಮಾಡಿದ್ದರು. ಆದರೆ, ಬಾಕಿ ಹಣವನ್ನು ಪಂಚಾಯಿತಿ ಇಂದಿಗೂ ಪಾವತಿಸದೆ ಕಾರಣ ಸಂಸ್ಥೆ ನ್ಯಾಯಾಲಯದ ಮೊರೆ ಹೋಗಿತ್ತು. ವಿಚಾರಣೆ ನಡೆಸಿದ ನ್ಯಾಯಾಲಯವು ಬಡ್ಡಿ ಸೇರಿ ಒಟ್ಟು 16.50 ಲ.ರೂ.

» ಎರಡನೇ ಪುಟದಲ್ಲಿ

# ರಾಜ್ಯಸಭೆಯಲ್ಲಿ ದೇವೇಗೌಡರು ಇರಬೇಕು: ನಿಖಿಲ್

• ಪ್ರಜೋದಯ ವರದಿ

**ಹಾಸನ:** ರಾಜ್ಯದ ಅಭಿವೃದ್ಧಿ ದೃಷ್ಟಿಯಿಂದ ಸಂಸತ್ತಿನಲ್ಲಿ ಚರ್ಚಿಸಲು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರು ರಾಜ್ಯಸಭೆ ಸದಸ್ಯರಾಗಿ ಮುಂದುವರಿಯ ಬೇಕೆನ್ನುವುದು ನಮ್ಮ ಅಭಿಲಾಷೆ. ಎನ್‌ಡಿಎ ನಾಯಕರು ಯಾವ ತೀರ್ಮಾನ ತೆಗೆದುಕೊಳ್ಳುತ್ತಾರೆಂಬುದನ್ನು ಕಾದು ನೋಡಬೇಕಿದೆ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹೇಳಿದರು.

ಸುದ್ದಿಗಾರರೊಂದಿಗೆ ಗುರುವಾರ ಮಾತನಾಡಿದ ಅವರು, ಪಕ್ಷಾತೀತವಾಗಿ ಎಲ್ಲರೂ ದೇವೇಗೌಡ ಅವರನ್ನು ಇಷ್ಟಪಡುತ್ತಾರೆ. 93ರ ಇಳಿವಯಸ್ಸಿನಲ್ಲೂ ಅವರು ರಾಜ್ಯದ ಪರವಾಗಿ ಗಟ್ಟಿಯಾಗಿ ಮಾತನಾಡು ತ್ತಾರೆ. ಇತ್ತೀಚೆಗೆ ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿಯಾಗಿ ಎತ್ತಿನಹೊಳೆ ಯೋಜನೆ ಕುರಿತು ಚರ್ಚಿಸಿ ಕಾಮಗಾರಿಗೆ ಅನುಮೋದನೆ ಕೊಡಿಸಿದರು. ಅಂತಹ ಮುತ್ಸದ್ದಿ ನಾಯಕ ರಾಜ್ಯಸಭೆಯಲ್ಲಿರ ಬೇಕೆನ್ನುವುದು ಎಲ್ಲರ ಅಭಿಲಾಷೆ ಎಂದರು.



ಈ ವಿಚಾರದಲ್ಲಿ ಎನ್‌ಡಿಎ ನಾಯಕರ ತೀರ್ಮಾನವೇ ಅಂತಿಮ. ನಾವು ಯಾವುದರಲ್ಲೂ ಒತ್ತಡ ಹೇರುವ ಪ್ರಶ್ನೆ ಇಲ್ಲ. ಯಾವ ಷರತ್ತುಗಳನ್ನು ವಿಧಿಸದೆ ಮೈತ್ರಿ ಮಾಡಿಕೊಂಡಿದ್ದೇವೆ. ದೇವೇಗೌಡರ ರಾಜಕೀಯ ಅನುಭವವನ್ನು ಸಮರ್ಪಕವಾಗಿ ಬಳಸಿಕೊಳ್ಳುವುದು ಪ್ರಧಾನಿ ಮೋದಿ ಅವರಿಗೆ ಬಿಟ್ಟ ವಿಚಾರವೆಂದು ಹೇಳಿದರು.

ದಾವಣಗೆರೆ ದಕ್ಷಿಣ ಹಾಗು ಬಾಗಲಕೋಟೆ ಉಪಚುನಾವಣೆಯಲ್ಲಿ ಕ್ಷೇತ್ರದ ಮತದಾರರು ಒಳ್ಳೆಯವರಿಗೆ ಬೆಂಬಲ ನೀಡುತ್ತಾರೆಂಬ ವಿಶ್ವಾಸವಿದೆ. ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಎರಡೂ ಕ್ಷೇತ್ರಗಳಲ್ಲಿ ಪ್ರಚಾರ ಮಾಡಿದ್ದಾರೆ. ಎನ್‌ಡಿಎ ಅಭ್ಯರ್ಥಿಗಳು ಗೆಲ್ಲುವ ವಿಶ್ವಾಸವಿದೆ ಎಂದರು.

ರಾಜ್ಯ ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರ, ಹಗರಣ ಮಿತಿ ಮೀರಿದೆ. ಸ್ವಾಭಾವಿಕವಾಗಿ ಆಡಳಿತ ಪಕ್ಷದ ಅಭ್ಯರ್ಥಿಗಳೇ ಉಪ ಚುನಾವಣೆಯಲ್ಲಿ ಗೆಲ್ಲುತ್ತಾರೆ. ಆದರೆ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರ ಅಭಿಪ್ರಾಯವನ್ನು ಅರಿಯುವುದು ಕಷ್ಟ. ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಮುಸ್ಲಿಂ ಸಮುದಾಯದವರು ಬಿಜೆಪಿ ಅಭ್ಯರ್ಥಿಗೆ ಮತ ನೀಡುತ್ತಾರೆಯೇ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಅಲ್ಪ ಸಂಖ್ಯಾತ, ಬೇರೆ ಜಾತಿ, ಧರ್ಮ, ಜನಾಂಗ ಎನ್ನುವುದಕ್ಕಿಂತ ಹೆಚ್ಚಾಗಿ ಬದಲಾವಣೆ ಕಾಣಬೇಕೆಂಬ ಭಾವನೆ ಮತದಾರರಲ್ಲಿ ಇದೆ. ಹಾಗಾಗಿ ಜನರು ಅಭ್ಯರ್ಥಿ ಹಾಗು ಎರಡೂ ಪಕ್ಷಗಳ ಕೆಲಸಗಳನ್ನು ನೋಡುತ್ತಾರೆ. 2028ರ ಚುನಾವಣೆಯ ದಿಕ್ಸೂಚಿಯಾಗಿ ಜನರು ಉತ್ತರ ಕೊಡುವ ನಿರೀಕ್ಷೆ ಇದೆ ಎಂದು ಹೇಳಿದರು. ಶಾಸಕರಾದ ಸಿ.ಎನ್. ಬಾಲಕೃಷ್ಣ, ಹೆಚ್.ಪಿ.ಸ್ವರೂಪ್ ಮತ್ತಿತರರಿದ್ದರು.

## ಆಶ್ರಯ ಮನೆಗಳ ಧ್ವಂಸ :ಪ್ರತಿಭಟನೆ



• ಪ್ರಜೋದಯ ವರದಿ

**ಹಾಸನ:** ಆಶ್ರಯ ಯೋಜನೆಯಡಿ ಕಾನೂನು ಬದ್ಧ ಹಕ್ಕು ಪತ್ರ ಹೊಂದಿರುವ ಮನೆಗಳನ್ನು ಧ್ವಂಸಗೊಳಿಸಿರುವುದನ್ನು ಖಂಡಿಸಿ, ಸೂಕ್ತ ಪರಿಹಾರ ಹಾಗು ಪುನರ್ವಸತಿ ಒದಗಿಸುವಂತೆ ಆಗ್ರಹಿಸಿ ರೈತ ಸಂಘದಿಂದ ಜಿಲ್ಲಾಧಿಕಾರಿ ಗುರುವಾರ ಕಚೇರಿ ಎದುರು ಪ್ರತಿಭಟನೆ ನಡೆಸಲಾ ಯಿತು.

ನಗರದ ಹೇಮಾವತಿ ಪ್ರತಿಮೆ ಬಳಿಯಿಂದ ಆರಂಭವಾದ ಪ್ರತಿಭಟನಾ ಮೆರವಣಿಗೆ ಎನ್.ಆರ್. ವೃತ್ತದ ಮೂಲಕ ಜಿಲ್ಲಾಧಿಕಾರಿ ಕಚೇರಿ ತಲುಪಿತು. ಈ ವೇಳೆ ಪ್ರತಿಭಟನಾಕಾರರು ಸರ್ಕಾರ ಹಾಗು ತಾಲ್ಲೂಕು ಆಡಳಿತದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ರೈತ ಸಂಘದ ಜಿಲ್ಲಾಧ್ಯಕ್ಷ ಬಾಬು ಅವರು ಮಾತನಾಡಿ, ಅರಕಲಗೂಡು

» ಎರಡನೇ ಪುಟದಲ್ಲಿ

**ಕುಡಿಯುವ ನೀರು, ಸ್ವಚ್ಛತೆ, ಅಭಿವೃದ್ಧಿ ಕಾರ್ಯಗಳಿಗೆ ಆದ್ಯತೆ**

## ಬಾಣಾವರ ಪ.ಪಂ.ಬಜೆಟ್ ಮಂಡನೆ

• ಪ್ರಜೋದಯ ವರದಿ


**ಬಾಣಾವರ:** ಮೊದಲ ಬಾರಿಗೆ ಬಾಣಾವರ ಪಟ್ಟಣ ಪಂಚಾಯಿತಿಯಲ್ಲಿ 19.18 ಕೋ.ರೂ. 2026-27ನೇ ಸಾಲಿನ ಆಯ-ವ್ಯಯವನ್ನು ಅಧ್ಯಕ್ಷ ಬಿ.ಹೆಚ್.ಸಂಜಯ್ ಅವರು ಮಂಡಿಸಿದರು.

ಸಭೆಯಲ್ಲಿ ಮಾತನಾಡಿದ ಅವರು, ಒಟ್ಟು 19.18 ಕೋ.ರೂ. ಬಜೆಟ್‌ನಲ್ಲಿ 19.12 ಕೋ.ರೂ. ಬಳಸಿಕೊಂಡು, 5.80 ಲ.ರೂ. ಉಳಿತಾಯವನ್ನು ನಿರೀಕ್ಷಿಸಲಾಗಿದೆ. ಬಾಣಾವರ ವೇಗವಾಗಿ ಬೆಳೆಯುತ್ತಿರುವ ದೊಡ್ಡ ಪಟ್ಟಣವಾಗಿದೆ. ಸರ್ವತೋಮುಖ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಮುಂದಿನ ದಿನಗಳಲ್ಲಿ ಹೆಚ್ಚಿನ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು. ನಗರ ನವೀಕರಣದ ಜೊತೆಗೆ ಸ್ವಚ್ಛತೆ ಮತ್ತು ಕುಡಿಯುವ ನೀರಿನ ವ್ಯವಸ್ಥೆಗೆ ಹೆಚ್ಚಿನ ಆದ್ಯತೆ ನೀಡಲಾಗುವುದೆಂದರು.

ಪಟ್ಟಣ ವ್ಯಾಪ್ತಿಯಲ್ಲಿ ಇತ್ತೀಚೆಗೆ ಕೆಲವು ಸಮಾಜಘಾತಕ ಚಟುವಟಿಕೆಗಳು ಯುವಜನರಲ್ಲಿ ಕಂಡು ಬರುತ್ತಿರುವ ಹಿನ್ನಲೆ, ಅವುಗಳಿಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ ತಹಶೀಲ್ದಾರ್, ಪೊಲೀಸ್ ಇಲಾಖೆ ಹಾಗು ಸಂಬಂಧಿತ ಅಧಿಕಾರಿಗಳ ಸಹಕಾರದೊಂದಿಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು.

ಬಾಣಾವರ ಗ್ರಾಮ ಪಂಚಾಯಿತಿಯಿಂದ ಪಟ್ಟಣ ಪಂಚಾಯಿತಿಯಾಗಿ ಮೇಲ್ದರ್ಜೆಗೆ ಏರಿದ ಹಿನ್ನಲೆ ಸಾರ್ವಜನಿಕರೊಂದಿಗೆ ಸ್ನೇಹ, ಪ್ರೀತಿ ಮತ್ತು ವಿಶ್ವಾಸದಿಂದ ಕಾರ್ಯನಿರ್ವಹಿಸುವಂತೆ ಅಧಿಕಾರಿಗಳಿಗೆ ಮನವಿ ಮಾಡಿದ ಅವರು, ಸಾರ್ವಜನಿಕರಿಂದ ಯಾವುದೇ ದೂರುಗಳು ಬಂದಲ್ಲಿ ಮೊದಲು ಅವರಿಗೆ ಸಮರ್ಪಕ ಮಾಹಿತಿ ನೀಡಿ, ನಂತರ ಕ್ರಮ ಕೈಗೊಳ್ಳಬೇಕೆಂದು ಸೂಚಿಸಿದರು. ರಸ್ತೆ ಬದಿ ವ್ಯಾಪಾರಿಗಳಿಗೆ ಪರ್ಯಾಯ ಮೂಲಸೌಕರ್ಯ ಒದಗಿಸಿ, ಬಳಿಕವೇ

» ಎರಡನೇ ಪುಟದಲ್ಲಿ



## ದ್ವಿತೀಯ ಪಿಯುಸಿ ಜಿಲ್ಲಾವಾರು ಫಲಿತಾಂಶ

| ಶ್ರೇಣಿ | ಜಿಲ್ಲೆ | ಶೇಕಡಾವಾರು |
|---|---|---|
| 1 | ಉಡುಪಿ | 96.39 |
| 2 | ದಕ್ಷಿಣ ಕನ್ನಡ | 96.35 |
| 3 | ಕೊಡಗು | 92.34 |
| 4 | ವಿಜಯಪುರ | 92.00 |
| 5 | ಉತ್ತರ ಕನ್ನಡ | 91.78 |
| 6 | ಬೆಂಗಳೂರು ಗ್ರಾಮಾಂತರ | 91.00 |
| 7 | ಚಿಕ್ಕಮಗಳೂರು | 90.80 |
| 8 | ಬೆಂಗಳೂರು ದಕ್ಷಿಣ | 90.55 |
| 9 | ಚಿಕ್ಕಬಳ್ಳಾಪುರ | 90.24 |
| 10 | ಬೆಂಗಳೂರು ಉತ್ತರ | 90.05 |
| 11 | ಹಾಸನ | 89.71 |
| 12 | ಮಂಡ್ಯ | 88.85 |
| 13 | ರಾಮನಗರ | 87.90 |
| 14 | ಶಿವಮೊಗ್ಗಾ | 87.62 |
| 15 | ಕೋಲಾರ | 87.38 |
| 16 | ತುಮಕೂರು | 86.89 |
| 17 | ಕೊಪ್ಪಳ | 86.80 |
| 18 | ಮೈಸೂರು | 84.80 |
| 19 | ಚಾಮರಾಜನಗರ | 84.68 |
| 20 | ಬೀದರ್ | 84.61 |
| 21 | ಬಾಗಲಕೋಟೆ | 84.12 |
| 22 | ಹಾವೇರಿ | 84.11 |
| 23 | ಧಾರವಾಡ | 83.31 |
| 24 | ಚಿಕ್ಕೋಡಿ | 83.10 |
| 25 | ದಾವಣಗೆರೆ | 81.99 |
| 26 | ಬೆಳಗಾವಿ | 80.32 |
| 27 | ಚಿತ್ರದುರ್ಗ | 79.12 |
| 28 | ಬಳ್ಳಾರಿ | 78.69 |
| 29 | ಕಲಬುರಗಿ | 76.97 |
| 30 | ಗದಗ | 76.65 |
| 31 | ರಾಯಚೂರು | 74.09 |
| 32 | ಯಾದಗಿರಿ | 71.21 |

# ಸಕಲೇಶಪುರದಲ್ಲಿ ಶಿವಕುಮಾರ ಸ್ವಾಮೀಜಿ ಪುಣ್ಯ ಸ್ಮರಣೆ

## ಸಿದ್ದಗಂಗಾ ಮಠದ ಶ್ರೀ ಸಿದ್ದಲಿಂಗ ಸ್ವಾಮೀಜಿ ಸೇರಿ ವಿವಿಧ ಮಠಾಧೀಶರು ಭಾಗಿ

• ಪ್ರಜೋದಯ ವರದಿ



**ಸಕಲೇಶಪುರ:** ಪಟ್ಟಣದ ಶ್ರೀ ಗುರುವೇಗೌಡ ಕಲ್ಯಾಣ ಮಂಟಪದಲ್ಲಿ ವೀರಶೈವ -ಲಿಂಗಾಯತ ಯುವ ಸೇನೆ ವತಿಯಿಂದ ಹಮ್ಮಿಕೊಂಡಿದ್ದ ಡಾ. ಶ್ರೀ ಶಿವಕುಮಾರ ಸ್ವಾಮೀಜಿ ಅವರ 7ನೇ ವರ್ಷದ ಪುಣ್ಯ ಸ್ಮರಣೆ ಹಾಗು ಅನ್ನ ದಾಸೋಹ ಕಾರ್ಯಕ್ರಮವು ಭಕ್ತಿ ಭಾವದಿಂದ ಜರುಗಿತು.

ಸಿದ್ದಗಂಗಾ ಮಠದ ಶ್ರೀ ಸಿದ್ದಲಿಂಗ ಸ್ವಾಮೀಜಿ ಅವರು ಮಾತನಾಡಿ, ಶ್ರೀ ಶಿವಕುಮಾರ ಸ್ವಾಮೀಜಿ ತಮ್ಮ ಜೀವನದ 89 ವರ್ಷಗಳನ್ನು ವಿಶ್ರಾಂತಿ ಬಯಸದೆ ಸಮಾಜ ಸೇವೆಗೆ ಅರ್ಪಿಸಿ ಮಹಾನ್ ಚೇತನವಾಗಿದ್ದು, ಅವರ ಆದರ್ಶಗಳು ಇಂದಿನ ಸಮಾಜಕ್ಕೆ ದಾರಿ ದೀಪವಾಗಿವೆ ಎಂದು ತಿಳಿಸಿದರು.

ಗ್ರಾಮೀಣ ಭಾಗದ ವಿದ್ಯಾರ್ಥಿಗಳ ಭವಿಷ್ಯ ಉಜ್ವಲವಾಗಬೇಕೆಂಬ ಆಶಯ ದೊಂದಿಗೆ ಮಠದಲ್ಲಿ ಜಾತಿ-ಮತಗಳ ಭೇದವಿಲ್ಲದೆ ಲಕ್ಷಾಂತರ ಮಕ್ಕಳಿಗೆ ವಿದ್ಯಾಭ್ಯಾಸ, ಅನ್ನ ದಾಸೋಹ ಹಾಗು ಆಶ್ರಯ ಒದಗಿಸಿದ ಕಾಯಕ ಯೋಗಿಯ ಸೇವೆ ಅನನ್ಯವಾದುದು. ಸಕಲೇಶಪುರ ಭಾಗದೊಂದಿಗೆ ಅವಿನಾ ಭಾವ ಸಂಬಂಧ ಹೊಂದಿದ್ದ ಶ್ರೀಗಳು ಇಲ್ಲಿನ ಜನರು ಹಾಗು ಬೆಳೆಗಳ ಬಗ್ಗೆ ವಿಶೇಷ ಕಾಳಜಿ ಹೊಂದಿದ್ದರೆಂದು ಸ್ಮರಿಸಿದ ಅವರು, ಸಂಘಟನೆಯ ಮೂಲಕ ಸಮಾಜಮುಖಿ ಕೆಲಸ ಮಾಡುತ್ತಿರುವ ಸಾಗರ್ ಜಾನಕೆರೆ ಹಾಗು ತಂಡದ ಸೇವೆಯನ್ನು ಶ್ಲಾಘಿಸಿದರು.

ಗೌರಿಗದ್ದೆಯ ವಿನಯ್ ಗುರೂಜಿ ಮಾತನಾಡಿ, ವೀರಶೈವ ಧರ್ಮವು ದಯೆ, ಸೇವೆ ಮತ್ತು ಸಮಾನತೆಯ ತತ್ವಗಳ ಮೇಲೆ ನಿಂತಿದೆ. ದಯೆಯೇ ಧರ್ಮದ ಮೂಲವಾಗಿದ್ದು, ಮಠ-ಮಂದಿರಗಳ ದಾಸೋಹ ಪರಂಪರೆಯು ಸಮಾಜದ ಹಸಿವನ್ನು ನೀಗಿಸುವ ಪವಿತ್ರ ಕಾರ್ಯವಾಗಿದೆ. ಅಹಂಕಾರ ತ್ಯಜಿಸುವುದೇ ನಿಜವಾದ ಸನ್ಯಾಸತ್ವವಾಗಿದ್ದು, ಪ್ರತಿಯೊಬ್ಬರೂ ದಾನ ಗುಣವನ್ನು ಬೆಳೆಸಿಕೊಳ್ಳಬೇಕು. ಸರ್ಕಾರಗಳು ಐದು ವರ್ಷಕ್ಕೊಮ್ಮೆ ಬದಲಾಗಬಹುದು. ಆದರೆ, ಮಠಗಳ ಸೇವಾ ಪರಂಪರೆಗೆ ಅಳಿವಿಲ್ಲ. ಮಕ್ಕಳಿಗೆ ಶಿಕ್ಷಣದ ಜೊತೆಗೆ ಉತ್ತಮ ಸಂಸ್ಕಾರ ನೀಡುವುದು ಇಂದಿನ ಅಗತ್ಯವಾಗಿದ್ದು, ಮಲೆನಾಡು ಭಾಗದಲ್ಲಿ ಇಂದಿಗೂ ಸಂಸ್ಕಾರದ ಮೌಲ್ಯಗಳು ಜೀವಂತವಾಗಿವೆ ಎಂದು ನುಡಿದರು.

ತೆಂಕಲಗೂಡು ಬೃಹನ್ಮಠದ ಶ್ರೀ ಚನ್ನಸಿದ್ದೇಶ್ವರ ಸ್ವಾಮೀಜಿ ಮಾತನಾಡಿ, ಸರ್ಕಾರಗಳು ಮಾಡಲಾಗದ ಅನೇಕ ಕಾರ್ಯಗಳನ್ನು ಮಠಗಳು ನಿರಂತರವಾಗಿ ಮಾಡುತ್ತಾ ಬಂದಿದ್ದು, ಇಂತಹ ದಾಸೋಹ ಪರಂಪರೆಯನ್ನು ಮುಂದುವರಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವೆಂದರು.

ಕಿವುದೊಡ್ಡಿ ಮಠದ ಸದಾಶಿವ ಸ್ವಾಮೀಜಿ ಮಾತನಾಡಿ, ಶ್ರೀಗಳಿಗೆ ಮಲೆನಾಡು ಭಾಗದ ಜನರ ಮೇಲೆ ಅಪಾರ ಪ್ರೀತಿಯಿತ್ತು. ವರ್ಷದ ಬಹು ದಿನಗಳನ್ನು ಇಲ್ಲಿಯೇ ಸಂಚರಿಸುತ್ತಾ ಭಕ್ತಿಯನ್ನು ಪಸರಿಸುತ್ತಿದ್ದ ಅವರು, ಶಿಕ್ಷಣದಿಂದ ಮಾತ್ರ ಸಮಾಜದ ಸುಧಾರಣೆ ಸಾಧ್ಯವೆಂದು ನಂಬಿದ್ದರು ಎಂದು ಹೇಳಿದರು.

ಕೊಡ್ಲಿಪೇಟೆ ಕಲ್ಮಠದ ಶ್ರೀ ಮಹಾಂತ ಸ್ವಾಮೀಜಿ ಮಾತನಾಡಿ, ಸಿದ್ದಗಂಗಾ ಮಠದಲ್ಲಿ ಹತ್ತು ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳು ಸಂಸ್ಕಾರಯುತ ವಿದ್ಯಾಭ್ಯಾಸ ಪಡೆಯುತ್ತಿರುವುದು ಶ್ರೀಗಳು ಹಾಕಿಕೊಟ್ಟ ದೃಢ ಬುನಾದಿಗೆ ಸಾಕ್ಷಿಯಾಗಿದೆ ಎಂದರು.

ವೀರಶೈವ ಲಿಂಗಾಯತ ಯುವ ಸೇನೆ ಅಧ್ಯಕ್ಷ ಸಾಗರ್ ಜಾನಕೆರೆ ಅವರು ಮಾತನಾಡಿ, ಕೆಲವೇ ಸದಸ್ಯರಿಂದ ಆರಂಭವಾದ ನಮ್ಮ ಸಂಘಟನೆ ಸಾವಿರಾರು ಕಾರ್ಯಕರ್ತರ ಬಲದೊಂದಿಗೆ ಬೆಳೆಯುತ್ತಿರುವುದು ಹೆಮ್ಮೆಯ ವಿಷಯ ಎಂದರು.

ತಣ್ಣೀರುಹಳ್ಳ ಮಠದ ಶ್ರೀ ವಿಜಯಕುಮಾರ ಸ್ವಾಮೀಜಿ, ಮಾಜಿ ಶಾಸಕರಾದ ಹೆಚ್.ಕೆ.ಕುಮಾರಸ್ವಾಮಿ, ಹೆಚ್.ಎಂ.ವಿಶ್ವನಾಥ್, ವೀರಶೈವ ಯುವ ಸೇನೆಯ ನಾಗೇಂದ್ರ ಪಟೇಲ್, ಹರೀಶ್, ಮಲೆನಾಡು ವೀರಶೈವ ಸಮಾಜದ ತಾಲ್ಲೂಕು ಅಧ್ಯಕ್ಷ ಮೂಗಲಿ ಧರ್ಮಪ್ಪ, ಕಾರ್ಯದರ್ಶಿ ಯಡೇಹಳ್ಳಿ ಆರ್.ಮಂಜುನಾಥ್, ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ, ಮುಖಂಡರಾದ ಪುನೀತ್ ಬನ್ನಹಳ್ಳಿ, ಕಟ್ಟೆಗದ್ದೆ ನಾಗರಾಜ್, ಶಾಸಕ ಸಿಮೆಂಟ್ ಮಂಜು ಪತ್ನಿ ಪ್ರತಿಭಾ ಮಂಜುನಾಥ್ ಇತರರಿದ್ದರು.

## ಬಿಲ್ ಬಾಕಿ : ಹಾರನಹಳ್ಳಿ ಪಂಚಾಯಿತಿ ಪೀಠೋಪಕರಣ ಜಪ್ತಿ




» **ಮೊದಲನೇ ಪುಟದಿಂದ**

ಪಾವತಿಸುವಂತೆ ಪಂಚಾಯಿತಿಗೆ ಆದೇಶ ನೀಡಿತ್ತು. ಈ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಲು ಮೂರು ತಿಂಗಳ ಕಾಲಾವಕಾಶ ನೀಡಲಾಗಿದ್ದರೂ, ಈ ಕುರಿತು ಪಂಚಾಯಿತಿಯಿಂದ ಯಾವುದೇ ಹಣ ಪಾವತಿಯಾಗಲಿಲ್ಲ.

ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗೂ ಈ ಕುರಿತು ಸ್ಪಷ್ಟ ದಾಖಲೆಗಳ ಕೊರತೆ ಕಂಡು ಬಂದಿದ್ದು, ಸರಬ ರಾಜಾದ ವಸ್ತುಗಳ ವಿವರಗಳು ಮತ್ತು ಬಿಲ್ ದಾಖಲೆ ಗಳು ಕಡತಗಳಲ್ಲಿ ಲಭ್ಯವಿಲ್ಲವೆಂದು ತಿಳಿಸಿದ್ದರು. ಆದ್ದ ರಿಂದ ನ್ಯಾಯಾಲಯದ ಆದೇಶದಂತೆ ಬಾಕಿ ಹಣ ಪಾವ ತಿಸದ ಹಿನ್ನಲೆ, ಪಂಚಾಯಿತಿಯ ಕಂಪ್ಯೂಟರ್ ಸೇರಿ ಪೀಠೋಪಕರಣಗಳನ್ನು ಜಪ್ತಿ ಮಾಡಿ ವಶಕ್ಕೆ ಪಡೆಯಲಾಯಿತು.

ಈ ಬಗ್ಗೆ ಅಕ್ಷಯ ಎಂಟರ್‌ಪ್ರೈಸಸ್ ಮಾಲೀಕ ಸಿದ್ದರಾಜು ಅವರು ಮಾತನಾಡಿ, ಅಂದಿನ ಪಂಚಾಯಿತಿ ಅಧ್ಯಕ್ಷರು ಹಾಗು ಕಾರ್ಯದರ್ಶಿಗಳಿಂದ ಇಂಡೆಂಟ್ ಪಡೆದು ವಸ್ತುಗಳನ್ನು ಸರಬರಾಜು ಮಾಡಿದ್ದೇವೆ. ನಂತರ ಪಂಚಾಯಿತಿ ಆಡಳಿತ ಬದಲಾಗಿದ್ದು, ಬಿಲ್ ಸಲ್ಲಿಸಲು ಬಂದಾಗ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿದರು. ಆದ್ದರಿಂದ ನ್ಯಾಯಾಲಯದಲ್ಲಿ ದಾವೆ ಹೂಡ ಬೇಕಾಯಿತು ಎಂದು ತಿಳಿಸಿದ್ದಾರೆ. ಈ ಕುರಿತು ಪಂಚಾಯಿತಿ ಆಡಳಿತಾಧಿಕಾರಿ ಹೇಮಂತ್ ಪ್ರತಿಕ್ರಿಯಿಸಿ, ಪ್ರಕರಣವನ್ನು ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಹೇಳಿದ್ದಾರೆ.

## ಬ್ರಿಲಿಯಂಟ್ ಕಾಲೇಜಿಗೆ ಶೇ. 99 ಫಲಿತಾಂಶ




ದ್ವಿತೀಯ ಪಿಯು ಫಲಿತಾಂಶದಲ್ಲಿ ಬ್ರಿಲಿಯಂಟ್ ಪದವಿ ಪೂರ್ವ ಕಾಲೇಜು ಶೇ. 99.6 ಫಲಿತಾಂಶ ಪಡೆದಿದೆ. ಟಿ. ಆರ್.ಹೇಮಲತಾ 589 ಅಂಕ ಪಡೆದು ಕಾಲೇಜಿಗೆ ಪ್ರಥಮ, ಅನನ್ಯ ಮತ್ತು ಬಿ. ಆರ್. ಬಿಂದುಶ್ರೀ 588 ಅಂಕ ಪಡೆದು ದ್ವಿತೀಯ ಸ್ಥಾನಕ್ಕೆ ಭಾಜನರಾಗಿದ್ದಾರೆ. ಕಾಲೇಜಿನ ಆಡಳಿತ ಮಂಡಳಿ, ಪ್ರಾಂಶುಪಾಲರು, ಬೋಧಕ ಹಾಗು ಬೋಧಕೇತರ ಸಿಬ್ಬಂದಿ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದ್ದಾರೆ.



**ಹಾಸನ: ತಾಲ್ಲೂಕಿನ ಗೊರೂರು ಶ್ರೀ ಯೋಗಾ ನರಸಿಂಹಸ್ವಾಮಿ ದೇವಸ್ಥಾನದ ಜೀರ್ಣೋದ್ಧಾರ ಕಾಮಗಾರಿಗೆ ಶಾಸಕ ಸಿಮೆಂಟ್ ಮಂಜು ಭೂಮಿಪೂಜೆ ನೆರವೇರಿಸಿದರು. ಬಿಜೆಪಿ ಮುಖಂಡರಾದ ಅಮೃತ್ ಕಟ್ಟಾಯ, ಧರಣಿ ರಾಮಘಟ್ಟ, ಸೋಮಣ್ಣ, ರವಿಕುಮಾರ್ ಕಟ್ಟಾಯ, ಕೃಷ್ಣ ಇತರರಿದ್ದರು.**

# ಸರ್ಕಾರಿ ಕಾಲೇಜು ವಿದ್ಯಾರ್ಥಿಯ ಸಾಧನೆ

• ಪ್ರಜೋದಯ ವರದಿ



**ಹಾಸನ:** ಹೆಚ್ಚು ಅಂಕ ಗಳಿಸಬೇಕೆಂದರೆ ಖಾಸಗಿ ಸಂಸ್ಥೆಗೆ ಸೇರಬೇಕು, ಕೋಚಿಂಗ್ ಪಡೆಯಲೇಬೇಕೆಂಬ ಅಲಿಖಿತ ನಿಯಮಗಳನ್ನು ಮುರಿದಿರುವ ವಿದ್ಯಾರ್ಥಿನಿಯೊಬ್ಬರು ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಓದಿ ದ್ವಿತೀಯ ಪಿಯು ವಿಜ್ಞಾನ ವಿಭಾಗದಲ್ಲಿ 593 ಅಂಕ ಪಡೆದು ಸಾಧನೆ ಮಾಡಿದ್ದಾರೆ.

ಅರಸೀಕೆರೆ ಸರ್ಕಾರಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ಜೂಡಿತ್ ಜೆಸಿಕಾ ಪ್ರಕಾಶ್ ಪಿಂಟೋ ಈ ಸಾಧನೆಗೆ ಪಾತ್ರರಾಗಿದ್ದು, ಯುಪಿಎಸ್ ಪರೀಕ್ಷೆ ಬರೆಯುವ ಕನಸು ಕಂಡಿದ್ದಾರೆ. ಕನ್ನಡದಲ್ಲಿ 100, ಇಂಗ್ಲೀಷ್ 96, ಭೌತಶಾಸ್ತ್ರದಲ್ಲಿ 100, ರಸಾಯನ ಶಾಸ್ತ್ರ 98, ಗಣಿತ 100 ಹಾಗು ಜೀವಶಾಸ್ತ್ರದಲ್ಲಿ 99 ಅಂಕ ಗಳಿಸಿದ್ದಾರೆ.

ಜೂಡಿತ್ ಅವರ ತಂದೆ ಪ್ರಕಾಶ್ ಅರಸೀಕೆರೆಯ ಸರ್ಕಾರಿ ಪದವಿ ಕಾಲೇಜಿನಲ್ಲಿ ಅತಿಥಿ ಉಪನ್ಯಾಸಕ ಹಾಗು ತಾಯಿ ಸುನಿತಾ ಸಂತ ಮೇರಿಸ್ ಶಾಲೆಯಲ್ಲಿ ಶಿಕ್ಷಕಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಪ್ರೌಢ ಶಾಲೆಯವರೆಗೆ ಸಂತ ಮೇರಿಸ್ ಶಾಲೆ ಯಲ್ಲೇ ಓದಿದ ಜುಡಿತ್ ಪಿಯುಸಿಗೆ ಸರ್ಕಾರಿ ಕಾಲೇಜಿಗೆ ಸೇರಿದ್ದರು.

**ಸರ್ಕಾರಿ ಕಾಲೇಜಿನಲ್ಲಿ ಸಕಲ ಸೌಲಭ್ಯ**

ಫಲಿತಾಂಶದ ಕುರಿತು ಪತ್ರಿಕೆ ಯೊಂದಿಗೆ ಮಾತನಾಡಿದ ಜೂಡಿತ್ ಅವರು, ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತಮ ಅಂಕ ಗಳಿಸಿದ್ದರಿಂದ ಪಿಯುಸಿಯನ್ನು ಖಾಸಗಿ ಕಾಲೇಜಿನಲ್ಲಿ ಮಾಡುವಂತೆ ಅನೇಕರು ಸಲಹೆ ನೀಡಿದರು. ಈ ಬಗ್ಗೆ ನಮ್ಮ ತಂದೆ-ತಾಯಿಗೂ ಸಾಕಷ್ಟು ತಿಳಿವಳಿಕೆ ಹೇಳಿದರು. ಸರ್ಕಾರಿ ಕಾಲೇಜಿನಲ್ಲಿ ಓದಿದರೆ ಉತ್ತಮ ಅಂಕ ಗಳಿಕೆ ಅಸಾಧ್ಯವೆಂದಿದ್ದರು.

ಆದರೆ, ಕಾಲೇಜಿನಲ್ಲಿ ಉತ್ತಮ ಪ್ರಯೋಗಾಲಯ, ಎಲ್ಲಾ ವಿಷಯಗಳಿಗೂ ನುರಿತ ಶಿಕ್ಷಕರು ಹಾಗು ವ್ಯಾಸಂಗಕ್ಕೆ ಪೂರಕ ವಾತಾವರಣ ಇದ್ದುದರಿಂದ ನಾನು ಧೈರ್ಯ ಮಾಡಿ ಪ್ರವೇಶ ಪಡೆದಿದ್ದೆ. ದ್ವಿತೀಯ ಪಿಯುಸಿಯಲ್ಲಿ ಯಾವುದೇ ಕೋಚಿಂಗ್ ಪಡೆಯಲಿಲ್ಲ. ಕಾಲೇಜಿನಲ್ಲಿ ಉಪನ್ಯಾಸಕರು ಪಾಠ ಮಾಡುತ್ತಿದ್ದುದನ್ನೇ ಗಮನವಿಟ್ಟು ಓದುತ್ತಿದ್ದೆ. ಅದೇ ನನಗೆ ನೆರವಾಯಿತು. ನೀಟ್ ಪರೀಕ್ಷೆಗೆ ತಯಾರಿ ಮಾಡಿಕೊಳ್ಳುತ್ತಿದ್ದು, ಕೋಚಿಂಗ್‌ಗೆ ಸೇರಿಲ್ಲ. ಯುಪಿಎಸ್‌ಸಿ ಪರೀಕ್ಷೆ ಬರೆದು ಸೇವಾ ಆಯೋಗದಲ್ಲಿ ಉದ್ಯೋಗ ಪಡೆಯುವ ಗುರಿ ಹೊಂದಿದ್ದೇನೆಂದರು.

**ಕಾಲೇಜಿನಲ್ಲಿ ಸಂಭ್ರಮದ ವಾತಾವರಣ**

ಜೂಡಿತ್ ಅವರ ತಾಯಿ ಸುನಿತಾ ಗುರುವಾರ ಎಸ್ ಎಸ್‌ಎಲ್‌ಸಿ ಪರೀಕ್ಷಾ ಮೌಲ್ಯಮಾಪನ ಕಾರ್ಯದಲ್ಲಿ ನಿರತರಾಗಿದ್ದರು. ದ್ವಿತೀಯ ಪಿಯು ಫಲಿ ತಾಂಶದ ದಿನವಾದ್ದರಿಂದ ಸಹೋ ದ್ಯೋಗಿಗಳೆಲ್ಲಾ ಮಗಳನ್ನು ಖಾಸಗಿ ಕಾಲೇಜಿಗೆ ಸೇರಿಸಬೇಕಿತ್ತು. ಫಲಿತಾಂಶ ಕಡಿಮೆಯಾಗಬಹುದೆಂದು ಚರ್ಚಿಸುತ್ತಿದ್ದರು. ಆದರೆ ಫಲಿತಾಂಶ ಪ್ರಕಟವಾದ ಬಳಿಕ ಯಾರೂ ಮಾತ ನಾಡಲಿಲ್ಲ. ಸರ್ಕಾರಿ ಕಾಲೇಜುಗಳು ಒಳ್ಳೆಯ ಫಲಿತಾಂಶ ತಂದು ಕೊಡುತ್ತವೆಂಬುದಕ್ಕೆ ನಮ್ಮ ಮಗಳು ಸಾಕ್ಷಿಯಾಗಿದ್ದಾಳೆಂದು ಸುನಿತಾ ಅವರು ಹೆಮ್ಮೆಪಟ್ಟರು. ಫಲಿತಾಂಶ ಪ್ರಕಟವಾಗುತ್ತಿದ್ದಂತೆ ಕಾಲೇಜಿಗೆ ಬಂದ ಪೋಷಕರನ್ನು ಕಾಲೇಜು ಆಡಳಿತ ಮಂಡಳಿ ಅಭಿನಂದಿಸಿದರು.

# ಶಾಸಕ ಸ್ವರೂಪ್ ಹುಟ್ಟುಹಬ್ಬ: ಇಂದಿನಿಂದ ಫುಟ್‌ಬಾಲ್ ಹಬ್ಬ




• ಪ್ರಜೋದಯ ವರದಿ

**ಹಾಸನ:** ಶಾಸಕ ಹೆಚ್.ಪಿ.ಸ್ವರೂಪ್ ಅವರ ಹುಟ್ಟುಹಬ್ಬದ ಅಂಗವಾಗಿ ಸ್ವರೂಪ್ ಪ್ರಕಾಶ್ ಅಭಿಮಾನಿ ಬಳಗ, ಹಾಸನ್ ಫುಟ್‌ಬಾಲ್ ಅಸೋಸಿಯೇಷನ್ ಸಹಯೋಗದಲ್ಲಿ ಏ.10 ರಿಂದ 3 ದಿನಗಳ ಕಾಲ ಸೆವೆನ್ಸ್ ಓಪನ್ ಹೊನಲು ಬೆಳಕಿನ ರಾಜ್ಯ ಮಟ್ಟದ ಫುಟ್‌ಬಾಲ್ ಪಂದ್ಯಾವಳಿ ಆಯೋಜಿಸಲಾಗಿದೆ ಎಂದು ಜಿಲ್ಲಾ ಜೆಡಿಎಸ್ ವಕ್ತಾರ ರಘು ಹೊಂಗೆರೆ ಅವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, ನಗರದ ಸಂಗಮೇಶ್ವರ ಬಡಾವಣೆಯ ಹೊಯ್ಸಳ ಸ್ಪೋರ್ಟ್ಸ್ ಅಕಾಡೆಮಿಯ ಟರ್ಫ್ ಮೈದಾನದಲ್ಲಿ ಪಂದ್ಯಾವಳಿ ನಡೆಯಲಿದೆ. ಬೆಂಗಳೂರು, ಮೈಸೂರು, ಮಂಡ್ಯ, ಕೋಲಾರ, ಕೆಜಿಎಫ್, ಮಡಿಕೇರಿ, ಚಿತ್ರದುರ್ಗ, ದಾವಣಗೆರೆ, ಮಂಗಳೂರು ಹಾಗು ಚಿಕ್ಕಮಗಳೂರು ಸೇರಿ ವಿವಿಧ ಜಿಲ್ಲೆಗಳಿಂದ 30ಕ್ಕೂ ಹೆಚ್ಚು ತಂಡಗಳು ಭಾಗವಹಿಸಲಿವೆ ಎಂದರು.

ಪಂದ್ಯಾವಳಿಯ ಅಂತಿಮ ಪಂದ್ಯ ಏ.12ರ ಭಾನುವಾರ ನಡೆಯಲಿದ್ದು, ವಿಜೇತ ತಂಡಗಳಿಗೆ ಪ್ರಥಮ ಬಹುಮಾನ 1,11,111 ರೂ. ಜೊತೆಗೆ ಟ್ರೋಫಿ, ದ್ವಿತೀಯ ಬಹುಮಾನ 77,777 ರೂ., ಟ್ರೋಫಿ ಮತ್ತು ಮೂರನೇ ಬಹುಮಾನವಾಗಿ 25,555 ರೂ. ನೀಡಲಾಗುವುದು. ಕ್ವಾರ್ಟರ್ ಫೈನಲಿಸ್ಟ್‌ಗೆ 5000 ರೂ. ಜೊತೆಗೆ ಬೆಸ್ಟ್ ಗೋಲರ್‌ಗೂ ಬಹುಮಾನ ಇದೆ ಎಂದ ಅವರು, ನೋಂದಣಿ ಶುಲ್ಕ 3000 ರೂ. ನಿಗದಿಪಡಿಸಲಾಗಿದೆ ಎಂದು ತಿಳಿಸಿದರು.

ನಗರ ಹಾಗು ಜಿಲ್ಲೆಯ ಜನರು, ಕ್ರೀಡಾಪಟುಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಪ್ರೋತ್ಸಾಹಿಸಬೇಕೆಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಹೊಯ್ಸಳ ಸ್ಪೋರ್ಟ್ಸ್ ಅಕಾಡೆಮಿ ಸದಸ್ಯರಾದ ಸುರೇಶ್, ಸತೀಶ್, ಬಾಲು, ಸುಮುಖ್, ಹೇಮಂತ್, ಗಿರೀಶ್ ಇದ್ದರು.

# ಬಾಣಾವರ ಪ.ಪಂ. ಬಜೆಟ್ ಮಂಡನೆ



» **ಮೊದಲನೇ ಪುಟದಿಂದ**

ಸ್ಥಳಾಂತರ ಕ್ರಮ ಕೈಗೊಳ್ಳುವಂತೆ ಸಲಹೆ ನೀಡಿದರು.

ರಾಷ್ಟ್ರೀಯ ಹೆದ್ದಾರಿ 234ರ ಕಾಮಗಾರಿ ಪ್ರಗತಿ ಕುರಿತು ಮಾಹಿತಿ ಪಡೆದು, ರಾಷ್ಟ್ರೀಯ ಹೆದ್ದಾರಿ 206 ರಲ್ಲಿ ನಿರ್ಮಿಸಿರುವ ರಸ್ತೆ ವಿಭಜಕಗಳ ಎತ್ತರವನ್ನು ಹೆಚ್ಚಿಸುವಂತೆ ಸಂಬಂಧಿತ ಅಧಿಕಾರಿಗಳಿಗೆ ಸೂಚನೆ ನೀಡುವಂತೆ ಆಗ್ರಹಿಸಿದರು.

ಸಭೆಯಲ್ಲಿ ಸದಸ್ಯ ಬಿ.ಆರ್.ಶ್ರೀಧರ್ ಮಾತನಾಡಿ, ಗ್ರಾಮ ಪಂಚಾಯಿತಿ ಅವಧಿಯಲ್ಲಿ ನಡೆದ ಅಕ್ರಮಗಳ ಬಗ್ಗೆ ತನಿಖೆ ನಡೆಸಿ, ಪಂಚಾಯಿತಿ ಆಸ್ತಿಗಳನ್ನು ಅಕ್ರಮವಾಗಿ ಖಾತೆ ಮಾಡಿಕೊಂಡವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಸದಸ್ಯ ಬಿ.ಆರ್.ಸುರೇಶ್ ಕುಡಿ ಯುವ ನೀರಿನ ಸಮಸ್ಯೆ ದಿನದಿಂದ ದಿನಕ್ಕೆ ಉಲ್ಬಣವಾಗುತ್ತಿರುವುದರಿಂದ ತಕ್ಷಣ ಪರಿಹಾರ ಕ್ರಮ ಕೈಗೊಳ್ಳಬೇಕು. ಕೆಟ್ಟು ನಿಂತಿರುವ ಮೋಟಾರ್ ಪಂಪ್‌ಗಳನ್ನು ತುರ್ತುವಾಗಿ ದುರಸ್ತಿ ಮಾಡಿಸಿ, ಸ್ವಚ್ಛತೆ ವ್ಯವಸ್ಥೆಯ ಮೇಲೂ ಹೆಚ್ಚಿನ ಗಮನ ಹರಿಸಬೇಕೆಂದು ಹೇಳಿದರು.

ಸಭೆಯಲ್ಲಿ ಸದಸ್ಯರಾದ ಬಿ.ಎಲ್.ವೆಂಕಟೇಶ್, ಸರಸ್ವತಿ, ಶ್ರೀನಿವಾಸ್, ವೀಣಾ ವಿಶ್ವನಾಥ್, ಆಶಾ ಹರೀಶ್, ವೀಣಾ ಸುರೇಶ್, ದಿವ್ಯಾ ಸೀಜು, ನೇತ್ರಾವತಿ ಇತರರಿದ್ದರು.

## ಸುಜಲ ಕಾಲೇಜಿಗೆ ಉತ್ತಮ ಫಲಿತಾಂಶ

• ಪ್ರಜೋದಯ ವರದಿ



**ಹಾಸನ:** ನಗರದ ಸುಜಲ ಪದವಿ ಪೂರ್ವ ಕಾಲೇಜು ದ್ವಿತೀಯ ಪಿಯು ಪರೀಕ್ಷೆಯಲ್ಲಿ ಶೇ. 100 ಫಲಿತಾಂಶ ದಾಖಲಿಸಿದೆ.

ಪರೀಕ್ಷೆ ಬರೆದ 200 ವಿದ್ಯಾರ್ಥಿಗಳಲ್ಲಿ 82 ಮಕ್ಕಳು ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.

ವಿಜ್ಞಾನ ವಿಭಾಗದಲ್ಲಿ ಶೇ.99.3 ಫಲಿತಾಂಶ ಬಂದಿದೆ. ಹೆಚ್.ಎನ್. ಮಿಥುನ್ 586 ಅಂಕ ಗಳಿಸಿ ಕಾಲೇಜಿಗೆ ಪ್ರಥಮ ಸ್ಥಾನ ಪಡೆದಿದ್ದಾರೆ. ಪಿ. ರಾಜೇಶ್ವರಿ 585 ಅಂಕಗಳೊಂದಿಗೆ ದ್ವಿತೀಯ ಟಾಪರ್ ಆಗಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ಶೇ.100 ಫಲಿತಾಂಶ ದೊರೆತಿದ್ದು ವಿದ್ಯಾರ್ಥಿಗಳನ್ನು ಕಾಲೇಜಿನ ಅಧ್ಯಕ್ಷ ಡಾ.ಎಸ್. ಲೋಕೇಶ್, ಕಾರ್ಯದರ್ಶಿ ಶ್ವೇತಾ ಲೋಕೇಶ್, ಪ್ರಾಂಶುಪಾಲ, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಅಭಿನಂದಿಸಿದ್ದಾರೆ.

## ವಸತಿ ನಿಲಯ ವಿದ್ಯಾರ್ಥಿಗಳ ಸಾಧನೆ

• ಪ್ರಜೋದಯ ವರದಿ

**ಆಲೂರು:** ದ್ವಿತೀಯ ಪಿಯು ವಾರ್ಷಿಕ ಪರೀಕ್ಷೆಯಲ್ಲಿ ಆಲೂರಿನ ಸಮಾಜ ಕಲ್ಯಾಣ ಇಲಾಖೆಯ ವಸತಿ ನಿಲಯಗಳಲ್ಲಿ ವ್ಯಾಸಂಗ ಮಾಡುತ್ತಿದ್ದ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ.

ಬಾಲಕಿಯರ ನಿಲಯದ 24 ಹಾಗು ಬಾಲಕರ ನಿಲಯದಿಂದ 16 ಮಕ್ಕಳು ಪರೀಕ್ಷೆ ಬರೆದಿದ್ದರು. ಒಟ್ಟು 7 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿ, ಪ್ರಥಮ ದರ್ಜೆಯಲ್ಲಿ 21 ಮಕ್ಕಳು ಪಾಸಾಗಿದ್ದಾರೆ. ಶೇ.98 ರಷ್ಟು ಫಲಿತಾಂಶ ದಾಖಲಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆ ತಾಲ್ಲೂಕು ಸಹಾಯಕ ನಿರ್ದೇಶಕ ಕೌಸರ್ ಅಹ್ಮದ್ ಅವರು ತಿಳಿಸಿದ್ದಾರೆ.

# ಮಕ್ಕಳಲ್ಲಿ ದೇಶಪ್ರೇಮ ಬೆಳೆಸುವುದು ಅತ್ಯವಶ್ಯಕ

• ಪ್ರಜೋದಯ ವರದಿ



**ಸಕಲೇಶಪುರ:** ತಾಯಂದಿರು ಮಕ್ಕಳಲ್ಲಿ ದೇಶ ಪ್ರೇಮ ಬೆಳೆಸಬೇಕೆಂದು ಶಾಸಕ ಸಿಮೆಂಟ್ ಮಂಜು ಧರ್ಮಪತ್ನಿ ಪ್ರತಿಭಾ ಅವರು ಹೇಳಿದರು.

ಪಟ್ಟಣದ ಪುರಭವನದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗು ಸಕಲೈಶ್ವರ್ಯ ಬ್ಲಾಕ್ ಸೊಸೈಟಿಯಿಂದ ಆಯೋಜಿಸಿದ್ದ 25ನೇ ವರ್ಷದ ಬೆಳ್ಳಿ ಮಹೋತ್ಸವ ಹಾಗು ಅಂತಾರ್ರಾಷ್ಟ್ರೀಯ ಮಹಿಳಾ ದಿನಾಚರಣೆ ಉದ್ಘಾಟಿಸಿ ಮಾತನಾಡಿ, ದೇಶದ ಆರ್ಥಿಕತೆ ಏಳಿಗೆಗೆ ದೊಡ್ಡ ಮಟ್ಟದಲ್ಲಿ ಮಹಿಳೆಯರು ಕೊಡುಗೆ ನೀಡುತ್ತಾರೆ. ಮಹಿಳೆಯರು ಕುಟುಂಬದ ಇತರರ ಆರೋಗ್ಯದ ಕಡೆಗೆ ಗಮನ ಹರಿಸುವ ಜೊತೆಗೆ ತಮ್ಮ ಆರೋಗ್ಯದ ಕಡೆ ಹೆಚ್ಚಿನ ಗಮನ ಹರಿಸಬೇಕು. ವರ್ಷಕ್ಕೆ ಒಮ್ಮೆಯಾದರೂ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕೆಂದರು.

ಸಣ್ಣ ಖಾಯಿಲೆ ದೊಡ್ಡದಾಗದಂತೆ ಮುನ್ನೆಚ್ಚರಿಕೆ ವಹಿಸಬೇಕು. ಪ್ರತಿಯೊಬ್ಬ ಮಹಿಳೆಯರು ಮನೆಯಲ್ಲಿರುವ ಹೆಣ್ಣು ಮಕ್ಕಳ ಬಗ್ಗೆ ವಿಶೇಷವಾಗಿ ಗಮನವರಿಸಬೇಕು. ಇಲ್ಲದಿದ್ದರೆ ಹೆಣ್ಣು ಮಕ್ಕಳು ಮಾಡುವ ತಪ್ಪಿಗೆ ತಾಯಿಯೇ ಉತ್ತರ ಕೊಡಬೇಕಾಗುತ್ತದೆ. ಶಿಕ್ಷಕರನ್ನು ಎಂದಿಗೂ ಮಕ್ಕಳ ಮುಂದೆ ಪೋಷಕರು ಬೈಯಬಾರದು, ಅದರಿಂದ ಶಿಕ್ಷಕರ ಗೌರವ ಕಡಿಮೆಯಾಗುತ್ತದೆ. ಪ್ರತಿಯೊಬ್ಬ ತಾಯಿಯು ಮಕ್ಕಳಲ್ಲಿ ಸಂಸ್ಕಾರ ಹಾಗು ದೇಶಭಕ್ತಿಯನ್ನು ತುಂಬಲು ಮುಂದಾಗಬೇಕೆಂದು ಹೇಳಿದರು.

ಇತ್ತೀಚಿನ ದಿನಗಳಲ್ಲಿ ಪ್ಲಾಸ್ಟಿಕ್ ಬಳಕೆ ಮಿತಿ ಮೀರುತ್ತಿದ್ದು ಪರಿಸರದ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಈ ನಿಟ್ಟಿನಲ್ಲಿ ಸ್ತ್ರೀ ಶಕ್ತಿ ಸಂಘಗಳು ಪ್ಲಾಸ್ಟಿಕ್ ಕಡಿಮೆ ಬಳಕೆ ಮಾಡುವಂತೆ ಜನರಲ್ಲಿ ಜಾಗೃತಿ ಮೂಡಿಸಬೇಕು. ಶಾಸಕರು ಅಂಗನವಾಡಿ ಶಿಕ್ಷಕರು ಹಾಗು ಸಿಬ್ಬಂದಿ ಸಮಸ್ಯೆಯನ್ನು ಬಗೆಹರಿಸುವ ನಿಟ್ಟಿನಲ್ಲಿ ಈಗಾಗಲೇ ವಿಶೇಷ ಸಭೆ ಮಾಡಿದ್ದಾರೆ. ನಿಮ್ಮೆಲ್ಲರ ಸಮಸ್ಯೆಗಳನ್ನು ಬಗೆಹರಿಸಲು ಶಾಸಕರು ಸದಾ ಇರುತ್ತಾರೆಂದರು.

ಶಿಶು ಅಭಿವೃದ್ಧಿ ಅಧಿಕಾರಿ ಇಂದಿರಾ ಅವರು ಮಾತನಾಡಿ, ತಾಲ್ಲೂಕಿನಲ್ಲಿ 540 ಸ್ತ್ರೀ ಶಕ್ತಿ ಸಂಘಗಳು ಕಾರ್ಯ ನಿರ್ವಹಿಸುತ್ತಿದೆ. 2000ರಲ್ಲಿ ಪ್ರಾರಂಭವಾದ ಒಕ್ಕೂಟಕ್ಕೆ 25 ವರ್ಷಗಳಾಗಿದೆ. ಸರ್ಕಾರ ಮಹಿಳೆಯರಿಗಾಗಿ ಹಲವಾರು ಯೋಜನೆಗಳನ್ನು ರೂಪಿಸಿದ್ದು ಬಳಸಿಕೊಂಡು ಮಹಿಳೆಯರು ಸಾಮಾಜಿಕ, ಆರ್ಥಿಕವಾಗಿ ಪ್ರಗತಿ ಸಾಧಿಸಬೇಕೆಂದರು.

ಹೇಮಾವತಿ ಜಿಲ್ಲಾ ಒಕ್ಕೂಟದ ಅಧ್ಯಕ್ಷೆ ಭಾರತಿ ಗೌಡ, ಸಕಲೈಶ್ವರ್ಯ ಬ್ಲಾಕ್ ಸೊಸೈಟಿ ಅಧ್ಯಕ್ಷೆ ಲತಾ ಜಯನಂದಾ ಹಾಜರಿದ್ದರು.

# ಜಮೀನಿಗೆ ಸಂಪರ್ಕಿಸುವ ರಸ್ತೆ ಬಂದ್: ಗ್ರಾಮಸ್ಥರ ಆರೋಪ




• ಪ್ರಜೋದಯ ವರದಿ

**ಹಾಸನ:** ಜಮೀನಿಗೆ ಸಂಪರ್ಕಿಸುವ ರಸ್ತೆಗೆ ಅಡ್ಡಲಾಗಿ ತಂತಿ ಬೇಲಿ, ಕಲ್ಲು ಕಂಬ ಅಳವಡಿಸಿ ವಿನಾಕಾರಣ ತೊಂದರೆ ನೀಡುತ್ತಿದ್ದು, ಸಮಸ್ಯೆಗೆ ಪರಿಹಾರ ಕಲ್ಪಿಸಬೇಕೆಂದು ಚನ್ನರಾಯಪಟ್ಟಣ ತಾಲ್ಲೂಕು ಹೊಸಹಳ್ಳಿ ಗ್ರಾಮದ ಹೆಚ್.ಕೆ.ಈರೇಗೌಡ ಅವರು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, ಗ್ರಾಮದ ಅಣ್ಣೇಗೌಡ, ಕರೀಗೌಡ ಮತ್ತಿತರರು ತೊಂದರೆ ಕೊಡುತ್ತಿದ್ದಾರೆ. ಪೂರ್ವಿಕರಿಂದಲೂ ಅದೇ ರಸ್ತೆಯನ್ನು ಬಳಸುತ್ತಿದ್ದೆವು. ಅವರ ದರ್ಪಕ್ಕೆ ಜಮೀನಿಗೆ ಹೋಗಲು ದಾರಿ ಇಲ್ಲದಂತಾಗಿದೆ ಎಂದು ಅಳಲು ತೋಡಿಕೊಂಡರು.

ಗ್ರಾಮಸ್ಥರೆಲ್ಲ ಸೇರಿ ತಿರುಗಾಡಲು ಎರಡೂ ಬದಿಯಿಂದ ಐದು ಅಡಿ ಜಾಗ ಬಿಡಲು ಒಪ್ಪಿದ್ದರು. ಶಿವರಾಜ್, ಸತೀಶ್, ರಾಮೇಗೌಡ, ಮಂಜುನಾಥ, ಮಾಯಾಚಾರಿ, ಸಂತೋಷ್, ಹೊನ್ನೇಗೌಡ, ಕಾಳೇಗೌಡ ಮೊದಲಾದವರೂ ಸಹ ರಸ್ತೆ ಬಿಡಲು ಒಪ್ಪಿದ್ದರು. ಆದರೆ ಎರಡು ತಿಂಗಳ ನಂತರ ಅಣ್ಣೇಗೌಡ, ಕರೀಗೌಡ, ಹೆಚ್.ಎನ್.ಶ್ರೀಕಂಠಯ್ಯ, ಹೆಚ್. ಎನ್.ಮೂರ್ತಿ, ನಂದಕುಮಾರ್ ಮತ್ತು ಹೇಮಲತಾ, ಸುಮಾ, ಸವಿತಾ ಎಂಬುವವರ ಜೊತೆ ಸೇರಿ ರಸ್ತೆಯಲ್ಲಿ ತಿರುಗಾಡದಂತೆ ನಿರ್ಬಂಧ ಹೇರಿದ್ದಾರೆಂದು ಆರೋಪಿಸಿದರು.

ಈ ಸಮಸ್ಯೆಗೆ ಕಾರಣ ಹೆಚ್.ಎನ್. ಮೂರ್ತಿ ಅವರಿಗೆ ಸೇರಿದ ಮುದಿಬೆಟ್ಟ ಕಾವಲು ಸ.ನಂ. 32, 33 ರಲ್ಲಿ ಸುಮಾರು 7 ಎಕರೆ ಜಮೀನನು ಸರ್ಕಾರಿ ಶಾಲೆ ಅಭಿವೃದ್ಧಿಗಾಗಿ ಹೆಚ್. ಕೆ.ನಂಜಪ್ಪ ಎಂಬುವವರು ದಾನವಾಗಿ ನೀಡಿದ್ದರು. ಆ ಜಮೀನು ಮೂರ್ತಿ ಅವರ ಮಗಳಾದ ಸಹನಾಗೆ ದಾಖಲಾಗಿದೆ. ಜಮೀನಿನ ಬಗ್ಗೆ ಗ್ರಾಮಸ್ಥರು ಸಿವಿಲ್ ಕೋರ್ಟ್‌ನಲ್ಲಿ ದಾವೆ ಹೂಡಿದ್ದಾರೆ.ಅದರಿಂದ ದ್ವೇಷ ಸಾಧಿಸುತ್ತಿದ್ದಾರೆಂದರು.

ಹೊಸಹಳ್ಳಿ ಗ್ರಾಮದಲ್ಲಿರುವ ಸರ್ವೆ ನಂ.2, 3, 4, 177 ರಲ್ಲಿ ತಿರುಗಾಡದಂತೆ ತಂತಿ ಬೇಲಿಯಿಂದ ಮುಚ್ಚಿದ್ದಾರೆ. ಕೂಡಲೇ ಈ ಜಾಗ ತೆರವು ಮಾಡಿಕೊಡಬೇಕೆಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಗ್ರಾಮಸ್ಥರಾದ ಹೆಚ್.ಸೋಮಶೇಖರ್, ಸತ್ಯಮೂರ್ತಿ, ರಾಘವಾಚಾರ್, ಶಿವರಾಜು, ಲತಾ ಇತರರು ಇದ್ದರು.

## ದೇವೇಗೌಡರು ಮತ್ತೊಮ್ಮೆ ರಾಜ್ಯಸಭೆಗೆ ಹೋಗಬೇಕು

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರು ಮತ್ತೊಮ್ಮೆ ರಾಜ್ಯಸಭೆಗೆ ಹೋದರೆ ಜಿಲ್ಲೆಗೆ, ರಾಜ್ಯಕ್ಕೆ ಒಳಿತಾಗುತ್ತದೆಂದು ವಿಧಾನ ಪರಿಷತ್ ಸದಸ್ಯ ಡಾ.ಸೂರಜ್ ರೇವಣ್ಣ ಅವರು ಹೇಳಿದರು.

ತಾಲ್ಲೂಕಿನ ಮೂಡನಹಳ್ಳಿ ಗ್ರಾಮದಲ್ಲಿ ನೂತನವಾಗಿ ನಿರ್ಮಾಣ ಗೊಂಡಿರುವ ಶ್ರೀ ಸತ್ಯಮ್ಮದೇವಿ ದೇವಾಲಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಾಜ್ಯದ ನೀರಾವರಿ ಯೋಜನೆ, ಜನಪರ ಕಾರ್ಯಕ್ರಮಗಳ ಬಗ್ಗೆ ಧ್ವನಿ ಎತ್ತುವಂತಹ ವ್ಯಕ್ತಿ ಯಾರಾದರೂ ಇದ್ದರೆ ಅದು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು. ಅವರ ಅನುಭವ, ದೂರ ದೃಷ್ಟಿಯ ಚಿಂತನೆ ಕೂಡ ಈ ರಾಜ್ಯಕ್ಕೆ, ರಾಷ್ಟ್ರಕ್ಕೆ ಅತೀ ಅವಶ್ಯ. ಖಂಡಿತವಾಗಿಯೂ ರಾಜ್ಯ ಸಭೆಗೆ ಹೋಗಬೇಕು ಎಂದರು. ಯಾವುದೇ ಉಪಚುನಾವಣೆಯ ಫಲಿತಾಂಶ ಅಲ್ಪ ಪ್ರಮಾಣದಲ್ಲಿ ಆಡಳಿತ ಪಕ್ಷಕ್ಕೆ ಬರುತ್ತದೆ. ಧಾರವಾಡ ಹಾಗು ಬಾಗಲಕೋಟೆ ಉಪ ಚುನಾವಣೆಗಳು ಸ್ಪರ್ಧಾತ್ಮಕವಾಗಿ ನಡೆದಿದ್ದು, ಆಶ್ಚರ್ಯಕರ ಫಲಿತಾಂಶ ಕೂಡ ಬರಬಹುದೆಂದರು.

## ಆಶ್ರಯ ಮನೆಗಳ ಧ್ವಂಸ :ಪ್ರತಿಭಟನೆ

» **ಮೊದಲನೇ ಪುಟದಿಂದ**

ತಾಲ್ಲೂಕು ಎಬಿಎಂ ಹಳ್ಳಿಯ ನಿವಾಸಿ ಗಳಿಗೆ 1991-92ರಲ್ಲಿ ತಹಶೀಲ್ದಾರ್ ಅವರಿಂದ ಆಶ್ರಯ ಯೋಜನೆಯಡಿ ಕಾನೂನು ಬದ್ಧವಾಗಿ ನಿವೇಶನ ಹಂಚಿಕೆ ಮಾಡಲಾಗಿತ್ತು. ಆ ನಿವೇಶನಗಳಲ್ಲಿ ಮನೆಗಳನ್ನು ನಿರ್ಮಿಸಿಕೊಂಡು ದಶಕಗಳಿಂದ ವಾಸಿಸುತ್ತಿದ್ದೇವೆ. ಆದರೆ, ಇತ್ತೀಚೆಗೆ ಸ್ಥಳೀಯ ಜನಪ್ರತಿನಿಧಿಗಳ ಒತ್ತಡದ ಮೇರೆಗೆ ನೋಟೀಸ್ ನೀಡದೆ ಹಾಗು ಕಾನೂನು ಪ್ರಕ್ರಿಯೆ ಅನುಸರಿಸದೆ ಮನೆಗಳಿಗೆ ಹಾನಿ ಮಾಡಲಾಗಿದೆ ಎಂದು ದೂರಿದರು.

ಕೆಲ ಮನೆಗಳ ಗೋಡೆಗಳನ್ನು ಕೆಡವಲಾಗಿದ್ದು, ಇನ್ನೂ ಕೆಲವು ಮನೆಗಳನ್ನು ತೆರವುಗೊಳಿಸಲು ಯತ್ನಿಸಲಾಗಿದೆ. ಇದರಿಂದ ಹಲವು ಕುಟುಂಬಗಳು ಆತಂಕದಲ್ಲಿ ದಿನ ಕಳೆಯುವಂತಾಗಿದೆ. ತಾಲ್ಲೂಕು ಆಡಳಿತವು ಪ್ರಭಾವಿ ವ್ಯಕ್ತಿಗಳ ಒತ್ತಡಕ್ಕೆ ಮಣಿದು ಹಕ್ಕುಪತ್ರದಾರರ ಮೇಲೆ ಅನ್ಯಾಯ ಮಾಡುತ್ತಿದೆ. ಅತಿಕ್ರಮಣಕಾರರ ವಿರುದ್ಧ ಕ್ರಮ ಕೈಗೊಳ್ಳದೇ, ಅವರಿಗೆ ಸಹಕಾರ ನೀಡುತ್ತಿರುವುದು ಅಸಂವಿಧಾನಿಕ ನಡೆ ಎಂದು ಕಿಡಿಕಾರಿದರು.

ಜಾಗದ ಸರಿಯಾದ ಅಳತೆ ಮತ್ತು ಗುರುತು ಪಡಿಸುವ ಕಾರ್ಯ ಕೈಗೊಳ್ಳದೇ ಅರ್ಹ ಹಕ್ಕುದಾರರಿಗೆ ತೊಂದರೆ ನೀಡಲಾಗುತ್ತಿದೆ. ಈ ಘಟನೆ ಬಡ ಕುಟುಂಬಗಳ ಮೂಲಭೂತ ಹಕ್ಕುಗಳ ಮೇಲಿನ ಸ್ಪಷ್ಟ ಹಲ್ಲೆಯಾಗಿದ್ದು, ಅವರನ್ನು ಅನಾಥರನ್ನಾಗಿ ಮಾಡುವ ಪ್ರಯತ್ನವಾಗಿದೆ. ತಕ್ಷಣ ಸರ್ಕಾರ ಹಾಗೂ ಜಿಲ್ಲಾಡಳಿತ ಮಧ್ಯ ಪ್ರವೇಶಿಸಿ ನ್ಯಾಯ ಒದಗಿಸಬೇಕೆಂದು ಒತ್ತಾಯಿಸಿದರು.

ಮನೆಗಳ ಧ್ವಂಸ ಕಾರ್ಯವನ್ನು ತಕ್ಷಣ ನಿಲ್ಲಿಸಬೇಕು. ಈಗಾಗಲೇ ಹಾನಿಗೊಳಿಸಿದ ಮನೆಗಳಿಗೆ ಸಮರ್ಪಕ ಪರಿಹಾರ ನೀಡಬೇಕು. ತಪ್ಪಿತಸ್ಥ ಅಧಿಕಾರಿಗಳು ಹಾಗು ಸಂಬಂಧಪಟ್ಟವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಹಕ್ಕುಪತ್ರದ ಆಧಾರದ ಮೇಲೆ ವಾಸಸ್ಥಳಕ್ಕೆ ರಕ್ಷಣೆ ಒದಗಿಸಬೇಕು. ಸಾರ್ವಜನಿಕ ಯೋಜನೆಗಾಗಿ ಜಾಗ ಬೇಕಾದಲ್ಲಿ ಕಾನೂನುಬದ್ಧ ಪರಿಹಾರ ಮತ್ತು ಪುನರ್ವಸತಿ ಕಲ್ಪಿಸಬೇಕೆಂದು ಆಗ್ರಹಿಸಿದರು.

ರೈತ ಸಂಘದ ರಾಜ್ಯ ಉಪಾಧ್ಯಕ್ಷ ಮೊಹಮ್ಮದ್ ಸಾದಿಕ್, ಮುಖಂಡರಾದ ಪವಿತ್ರ, ಅಕ್ಮಲ್ ಪಾಷಾ, ರೈತರು ಹಾಗು ಮಹಿಳೆಯರು ಇದ್ದರು.

# ಜಾಜೂರು ಗ್ರಾಮದಲ್ಲಿ ವೈಭವದ ರಥೋತ್ಸವ

• ಪ್ರಜೋದಯ ವರದಿ



**ಅರಸೀಕೆರೆ:** ತಾಲ್ಲೂಕಿನ ಜಾಜೂರು ಗ್ರಾಮದಲ್ಲಿ ಗ್ರಾಮ ದೇವತೆಗಳಾದ ಹೊನ್ನಾಲದಮ್ಮ ದೇವಿ ಹಾಗೂ ಅಮ್ಮಯ್ಯಜ್ಜಿ ದೇವಿ, ವೀರಭದ್ರೇಶ್ವರ ಸ್ವಾಮಿ, ಧೂತರಾಯ ಸ್ವಾಮಿ ಹಾಗು ಚಿಕ್ಕಮ್ಮ ದೇವರ ದಿವ್ಯ ರಥೋತ್ಸವವು ಗುರುವಾರ ವಿಜೃಂಭಣೆಯಿಂದ ನೆರವೇರಿತು.

ಗ್ರಾಮ ದೇವತೆಗಳಾದ ಹೊನ್ನಾಲದಮ್ಮ ಹಾಗು ಅಮ್ಮಯ್ಯಜ್ಜಿ ದೇವಿಯರನ್ನು ರಥದಲ್ಲಿ ಪ್ರತಿಷ್ಠಾಪಿಸಿದ ಬಳಿಕ ವೀರಭದ್ರೇಶ್ವರ ಸ್ವಾಮಿ, ಧೂತರಾಯ ಸ್ವಾಮಿ ಹಾಗು ಹೊಸಪಟ್ಟಣದ ಧೂತರಾಯ ಸ್ವಾಮಿ ದೇವರುಗಳು ರಥಕ್ಕೆ ಪೂಜೆ ಸಲ್ಲಿಸಿ ಈಡುಗಾಯಿ ಸಮರ್ಪಿಸಿದ ತಕ್ಷಣ ದೇವರ ನಾಮ ಸ್ಮರಣೆ ಯೊಂದಿಗೆ ರಥೋತ್ಸವಕ್ಕೆ ಚಾಲನೆ ದೊರೆಯಿತು.

ಇಷ್ಟಾರ್ಥ ಸಿದ್ಧಿಗಾಗಿ ಭಕ್ತರು ರಥಕ್ಕೆ ಬಾಳೆ ಹಣ್ಣು ಮತ್ತು ದವನ ಎಸೆದು ಪ್ರಾರ್ಥಿಸಿದರು. ರಥೋತ್ಸವ ಸಂಪನ್ನಗೊಂಡ ಬಳಿಕ ನೆರೆದಿದ್ದ ಭಕ್ತ ಸಮೂಹಕ್ಕೆ ಪಾನಕ ಫಲಹಾರ ವಿತರಿ ಸಲಾಯಿತು. ಜೊತೆಗೆ ಪ್ರಸಾದ ವಿನಿಯೋಗ ನಡೆಯಿತು.

ರಥೋತ್ಸವ ಅಂಗವಾಗಿ ಗ್ರಾಮದಲ್ಲಿ ನೆಲೆಸಿರುವ ರಂಗನಾಥ ಸ್ವಾಮಿ, ಹುತ್ತದಮ್ಮ ದೇವಿ ಮತ್ತು ಗಂಗಮ್ಮ ದೇವಿ, ಚಿಕ್ಕಮ್ಮ ದೇವಿಯ ಉತ್ಸವ ಮೂರ್ತಿ ಮತ್ತು ಪ್ಲೇಗಿನಮ್ಮ ದೇವಿಯರ ದೇವಾಲಯದಲ್ಲಿ ಹಾಗು ದುರ್ಗಮ್ಮ, ಪುರದಮ್ಮ ದೇವಿ ದೇಗುಲಗಳಲ್ಲಿ ವಿಶೇಷ ಪೂಜೆ ಹಾಗೂ ಅಭಿಷೇಕ ಮತ್ತು ಅಲಂಕಾರ ಸೇರಿ ವಿವಿಧ ಧಾರ್ಮಿಕ ವಿಧಿ ವಿಧಾನಗಳು ನೆರವೇರಿದವು.

ರಥೋತ್ಸವ ಸಂಪನ್ನಗೊಂಡ ಬಳಿಕ ಗೋಧೂಳಿ ಸಮಯದಲ್ಲಿ 5 ದಿನಗಳ ಜಾತ್ರಾ ಮಹೋತ್ಸವದ ವಿಶೇಷವಾಗಿ ಪ್ರತಿ ಜಾತ್ರಾ ಮಹೋತ್ಸವದಲ್ಲಿ ಜರುಗುವ ವೀರಭದ್ರೇಶ್ವರ ಸ್ವಾಮಿ, ಧೂತರಾಯ ಸ್ವಾಮಿ, ಹೊಸಪಟ್ಟಣದ ಧೂತರಾಯ ಸ್ವಾಮಿ ಹಾಗು ಹೊನ್ನಾಲದಮ್ಮ ದೇವಿ, ಅಮ್ಮಯ್ಯಜ್ಜಿ ದೇವಿ ದೇವರುಗಳ ಮಣೇವು ಉತ್ಸವವು ಅಪಾರ ಸಂಖ್ಯೆಯ ಭಕ್ತರ ಸಮ್ಮುಖದಲ್ಲಿ ಅದ್ದೂರಿಯಾಗಿ ಜರುಗಿತು.

ಭಕ್ತರು ರಥೋತ್ಸವದ ವೇಳೆ ಬಿಸಿಲಿನ ಬೇಗೆಯನ್ನು ಎಷ್ಟೇ ಅನುಭವಿಸಿದರೂ ಲೆಕ್ಕಿಸದೆ ಸಂಜೆ ನಡೆದ ದೇವರುಗಳ ಮಣೇವು ಉತ್ಸವವನ್ನು ತದೇಕ ಚಿತ್ತದಿಂದ ವೀಕ್ಷಿಸಿದ್ದು ವಿಶೇಷವಾಗಿತ್ತು. ಮಣೇವು ಉತ್ಸವದಲ್ಲಿ ಭಕ್ತರು ತಮಗೆ ಇಷ್ಟಾನುಸಾರ ಬಾಳೆಗೊನೆ ಮತ್ತು ಮಂಡಕ್ಕಿ ಸಮರ್ಪಿಸುವುದು ವಾಡಿಕೆ.

ಏ.5 ರಿಂದ 9ರ ವರೆಗೆ ಜರುಗಿದ ಜಾತ್ರಾ ಮಹೋತ್ಸವದ ಪ್ರಯುಕ್ತ ಇಡೀ ಗ್ರಾಮವನ್ನು ವಿದ್ಯುತ್ ದೀಪ ಮತ್ತು ಹಸಿರು ತೋರಣಗಳಿಂದ ಅಲಂಕರಿಸಲಾಗಿತ್ತು. ರಥೋತ್ಸವದಲ್ಲಿ ಮಕ್ಕಳ ಆಟಿಕೆ ವಸ್ತು ಹಾಗು ಮಂಡಕ್ಕಿ ಖಾರ ಮತ್ತು ಸಿಹಿ ತಿನಿಸುಗಳ ವ್ಯಾಪಾರ ವಹಿವಾಟು ಜೋರಾಗಿ ನಡೆಯಿತು.

## ಲಕ್ಷ್ಮೀ, ಬಿಂದುಶ್ರೀ ಚ.ರಾ.ಪಟ್ಟಣ ತಾಲ್ಲೂಕಿಗೆ ಪ್ರಥಮ



**ಚನ್ನರಾಯಪಟ್ಟಣ:** ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಪಟ್ಟಣದ ಕ್ರೈಸ್ಟ್ ಕಾಲೇಜಿನ ವಿಜ್ಞಾನ ವಿಭಾಗದ ಎಸ್. ಎಸ್.ಲಕ್ಷ್ಮಿ 595 ಮತ್ತು ವಾಣಿಜ್ಯ ವಿಭಾಗದಲ್ಲಿ ಫೋಕಸ್ ಕಾಲೇಜಿನ ಎಂ. ಬಿಂದುಶ್ರೀ 589 ಅಂಕಗಳೊಂದಿಗೆ ತಾಲ್ಲೂಕಿಗೆ ಪ್ರಥಮ ಸ್ಥಾನ ಪಡೆದಿದ್ದಾರೆ.

ಪಟ್ಟಣದ ಕೋಟೆ ಬಡಾವಣೆಯಲ್ಲಿರುವ ಕ್ರೈಸ್ಟ್ ದಿ ಕಿಂಗ್ ಪಿಯು ಕಾಲೇಜಿನ ವಿಜ್ಞಾನ ವಿಭಾಗದ ಎಸ್.ಎಸ್. ಲಕ್ಷ್ಮಿ 600 ಅಂಕಗಳಿಗೆ 596 (ಶೇ. 99.16) ಮತ್ತು ಡಿ.ಕಾಳೇನಹಳ್ಳಿ ರಸ್ತೆಯಲ್ಲಿರುವ ಫೋಕಸ್ ಪಿಯು ಕಾಲೇಜಿನ ವಾಣಿಜ್ಯ ವಿಭಾಗದ ವಿದ್ಯಾರ್ಥಿನಿ ಎಂ.ಬಿಂದುಶ್ರೀ 600 ಅಂಕಗಳಿಗೆ 589 (ಶೇ.98.16) ಅಂಕ ಗಳಿಸಿ ಸಾಧನೆ ಮಾಡಿದ್ದಾರೆ. ಕಾಲೇಜಿಗೆ ಕೀರ್ತಿ ತಂದ ವಿದ್ಯಾರ್ಥಿಗಳನ್ನು ಕ್ರೈಸ್ಟ್ ದಿ ಕಿಂಗ್ ಕಾಲೇಜಿನ ಅಂತೋನಿ ರಾಜ್ ಮತ್ತು ಫೋಕಸ್ ಕಾಲೇಜಿನ ಪ್ರಾಂಶುಪಾಲ ಎ.ಆರ್.ಜೀವನ್, ಸಂಸ್ಥೆಯ ಅಧ್ಯಕ್ಷ ಸಿ.ಎಸ್.ಶ್ರೀಹರ್ಷ, ಉಪಾಧ್ಯಕ್ಷ ಬಿ.ಪಿ.ಮೋಹನ್ ಅಭಿನಂದಿಸಿದ್ದಾರೆ.

# ಸಿಲಿಂಡರ್‌ಗಳ ದಾಸ್ತಾನು ಲಭ್ಯ: ಅನಗತ್ಯ ಬುಕಿಂಗ್ ಬೇಡ

## ಆತಂಕಕ್ಕೆ ಒಳಗಾಗುವ ಅವಶ್ಯಕತೆ ಇಲ್ಲ: ಡಿಸಿ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯ ಎಲ್ಲಾ ಗೃಹಬಳಕೆ ಅಡುಗೆ ಅನಿಲ ಗ್ಯಾಸ್ ಸಿಲಿಂಡರ್ ಉಪಯೋಗಿಸುವ ಗ್ರಾಹಕರಿಗೆ ಜಿಲ್ಲೆಯಲ್ಲಿ ಗೃಹಬಳಕೆ ಅಡುಗೆ ಅನಿಲ ಸಿಲಿಂಡರ್‌ಗಳ ದಾಸ್ತಾನು ಸಾಕಷ್ಟು ಪ್ರಮಾಣದಲ್ಲಿ ಲಭ್ಯವಿರುವುದರಿಂದ ಎಲ್.ಪಿ.ಜಿ ಸಿಲಿಂಡರ್‌ಗಳ ಸರಬರಾಜಿನ ಬಗ್ಗೆ ಯಾವುದೇ ರೀತಿಯ ಆತಂಕಕ್ಕೆ ಒಳಗಾಗುವ ಅವಶ್ಯಕತೆ ಇಲ್ಲ. ಗ್ರಾಹಕರು ಆತಂಕದಲ್ಲಿ ಅನಗತ್ಯ ಬುಕಿಂಗ್ ಮಾಡದಿರಲು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ತಿಳಿಸಿದ್ದಾರೆ.

ಇ-ಕೆವೈಸಿ ಮಾಡಿರುವ ಗ್ರಾಹಕರು ತಮ್ಮ ರಿಜಿಸ್ಟರ್ ಮೊಬೈಲ್ ನಂಬರ್ ಮೂಲಕ ಅನಿಲ ಸಿಲಿಂಡರ್‌ಗಳ ಬುಕಿಂಗ್‌ನ್ನು ಈ ಕೆಳಗಿನ ನಂಬರ್‌ಗಳಿಗೆ ಬುಕಿಂಗ್ ಮಾಡಲು ಅವಕಾಶವಿರುತ್ತದೆ.

ಗ್ಯಾಸ್ ಏಜೆನ್ಸಿಗಳಲ್ಲಿ ಸೇಲ್ ಆಫೀಸರ್‌ರವರ ಮೊಬೈಲ್ ಸಂಖ್ಯೆ ಲಭ್ಯವಿದ್ದು ಅವರನ್ನು ಸಹ ಸಂಪರ್ಕಿಸಲು ತಿಳಿಸಿದೆ. ಗ್ರಾಹಕರು ಒಮ್ಮೆ ಬುಕಿಂಗ್ ಮಾಡಿದ ನಂತರ ಗ್ರಾಮಾಂತರ ಪ್ರದೇಶದಲ್ಲಿ 45 ದಿನಗಳು ಹಾಗೂ ನಗರ/ಪಟ್ಟಣ ಪ್ರದೇಶದಲ್ಲಿ 25 ದಿನಗಳ ನಂತರ ಬುಕಿಂಗ್ ಮಾಡಲು ಅವಕಾಶವಿರುತ್ತದೆ.



ಗ್ರಾಹಕರ (GOOGLE PLAY STORE, APPLE STORE ) HPCL, BPCL, IOCL APPN ಮಾಡಲು ಅವಕಾಶವಿರುತ್ತದೆ. ಬುಕಿಂಗ್ ಮಾಡಿರುವ ಅನಿಲ ಗ್ರಾಹಕರಿಗೆ OTP ಮುಖಾಂತರ ಸಿಲಿಂಡರ್ ಸರಬರಾಜು ವ್ಯವಸ್ಥೆ ಇದ್ದು ತಮ್ಮ ಮೊಬೈಲ್ ನಂ.ಗೆ ಬಂದಿರುವ OTP ಅನ್ನು DELIVERY BOY ಗೆ ತಿಳಿಸಿ ಗ್ಯಾಸ್ ಸಿಲಿಂಡರ್ ಅನ್ನು ಪಡೆಯಲು ತಿಳಿಸಿದೆ.

ಗ್ರಾಹಕರಿಗೆ ಗೃಹಬಳಕೆ ಅನಿಲ ಸಿಲಿಂಡರ್ ಕುರಿತು ಯಾವುದೇ ಸಮಸ್ಯೆ ಇದ್ದಲ್ಲಿ ಹತ್ತಿರದ ಗ್ಯಾಸ್ ಏಜೆನ್ಸಿ ತಾಲ್ಲೂಕಿನ ತಹಸೀಲ್ದಾರ್ ಕಚೇರಿಯ ಆಹಾರ ಶಾಖೆಯನ್ನು ಹಾಗೂ ಜಿಲ್ಲೆಯಲ್ಲಿನ ಜಂಟಿ ನಿರ್ದೇಶಕರ ಕಚೇರಿ, ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಹಾಸನ ಜಿಲ್ಲೆಯ ಈ ಕೆಳಕಂಡ ದೂರವಾಣಿ ಸಂಖ್ಯೆಗಳಿಗೆ ಕರೆ ಮಾಡಿ ಪರಿಹಾರ ಕಂಡುಕೊಳ್ಳಬಹುದಾಗಿದೆ.

ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಜಂಟಿ ನಿರ್ದೇಶಕರ ಕಾರ್ಯಾಲಯ, 9606025519, ಆಲೂರು ತಾಲ್ಲೂಕು ಆಹಾರ ನಿರೀಕ್ಷಕರು- 9845012272, ಆಹಾರ ಶಿರಸ್ತೇದಾರರು 8970353599, ಅರಕಲಗೂಡು ತಾಲ್ಲೂಕು – 9880292823, ಅರಸೀಕೆರೆ ತಾಲ್ಲೂಕು 9380328907, 9844771286, ಬೇಲೂರು ತಾಲ್ಲೂಕು – 9483822244, 886166572, ಚನ್ನರಾಯಪಟ್ಟಣ ತಾಲ್ಲೂಕು- 9964244343, 6364309328, ಹಾಸನ ತಾಲ್ಲೂಕು – 9740290428, 9845872348, ಹಾಸನ ನಗರ- 9886168827, ಹೊಳೆನರಸೀಪುರ ತಾಲ್ಲೂಕು- 9008920075, 9902737134, ಸಕಲೇಶಪುರ ತಾಲ್ಲೂಕು – 9902382986, 9481258935,

ಅನಧಿಕೃತವಾಗಿ ಗ್ಯಾಸ್ ಸಿಲಿಂಡರ್‌ಗಳ ಅಕ್ರಮ ದಾಸ್ತಾನುಸಾಗಾಣಿಕೆ/ Rolling ಪ್ರಕರಣಗಳು ಕಂಡುಬಂದಿದಲ್ಲಿ Essential Commodities Act 1955 and Petroleum Products (Maintenance of Production Storage and Supply) Order 1999 and LPG Control Order 2000 ರಡಿಯಲ್ಲಿ ಕಾನೂನು ರೀತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ.

# ವಿಜೃಂಭಣೆಯ ಹುಚ್ಚಮ್ಮದೇವಿಯ ಜೋಡಿ ರಥೋತ್ಸವ

• ಪ್ರಜೋದಯ ವರದಿ

**ಅರಸೀಕೆರೆ:** ಜೇನುಕಲ್ಲು ಸಿದ್ದೇಶ್ವರ ಸ್ವಾಮಿ ಹಾಗೂ ಯಳವಾರೆ ಹುಚ್ಚಮ್ಮ ದೇವಿಯ ಜೋಡಿ ರಥೋತ್ಸವವು ಸಹಸ್ರಾರು ಭಕ್ತಾದಿಗಳ ಸಮ್ಮುಖದಲ್ಲಿ ವಿಜೃಂಭಣೆಯಿಂದ ಜರುಗಿತು.

ಯಳವಾರೆ ಗ್ರಾಮ ಸೇರದಂತೆ ಸುತ್ತಮುತ್ತಲಿನ ಹತ್ತಾರು ಗ್ರಾಮಗಳಿಗೆ ಗ್ರಾಮದೇವತೆಯಾಗಿರುವ ಹುಚ್ಚಮ್ಮ ದೇವಿ ಜಾತ್ರಾ ಮಹೋತ್ಸವದಲ್ಲಿ ಜೇನುಕಲ್ಲು ಸಿದ್ದೇಶ್ವರ ಸ್ವಾಮಿಯ ರಥೋತ್ಸವವೂ ಸಹ ಇಲ್ಲಿ ನಡೆಯುವುದರಿಂದ ಜೋಡಿ ರಥೋತ್ಸವವೆಂದೆ ತಾಲೂಕಿನಲ್ಲಿ ಪ್ರಸಿದ್ಧಿಯಾಗಿದೆ.

ಹಾಗಾಗಿ ಈ ಜೋಡಿ ರಥೋತ್ಸವವನ್ನು ಕಣ್ತುಂಬಿಕೊಳ್ಳಲು ದೇವಿಯ ಒಕ್ಕಲು ಸೇರಿದಂತೆ ತಾಲೂಕಿನ ಜನತೆ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುತ್ತಾರೆ. ರಥೋತ್ಸವಕ್ಕೂ ಮುನ್ನ ರಾತ್ರಿಪೂರ್ತಿ ಉಚ್ಚಮ್ಮ ದೇವಿ ಸಮೇತ ಜೇನುಕಲ್ಲು ಸಿದ್ದೇಶ್ವರ ಸ್ವಾಮಿಯ ಉತ್ಸವವು ಗ್ರಾಮದಲ್ಲಿ ನಡೆಯುತ್ತದೆ ಮುಂಜಾನೆ ಕರ್ಪೂರ ಸೇವೆ ಬಳಿಕ ಜೇನುಕಲ್ಲು ಸಿದ್ದೇಶ್ವರ ಸ್ವಾಮಿ ಹಾಗೂ ಹುಚ್ಚಮ್ಮ ದೇವಿಯ ಉತ್ಸವ ಮೂರ್ತಿಗಳನ್ನು ಪ್ರತ್ಯೇಕ ವ್ರತಮಂಟಪದಲ್ಲಿ ಪ್ರತಿಷ್ಠಾಪಿಸಿ ಮಹಾಮಂಗಳಾರತಿ ಬೆಳಗುತ್ತಿದ್ದಂತೆ ಜೋಡಿ ರಥೋತ್ಸವಕ್ಕೆ ಚಾಲನೆ ದೊರೆಯುತ್ತದೆ.



## ಹತ್ತಾರು ಗ್ರಾಮಗಳ ಗ್ರಾಮದೇವತೆ

ಈ ಶುಭಗಳಿಗೆಗಾಗಿ ಕಾಯುವ ಭಕ್ತರು ಉಚ್ಚಮ್ಮ ದೇವಿ ಹಾಗೂ ಜೇನುಕಲ್ಲು ಸಿದ್ದೇಶ್ವರ ಸ್ವಾಮಿಯ ನಾಮ ಸ್ಮರಣೆ ಮಾಡುತ್ತಾ ಭಕ್ತಿ ಭಾವದೊಂದಿಗೆ ರಥವನ್ನು ಎಳೆದು ಪುನೀತರಾಗುತ್ತಾರೆ.



ರಥೋತ್ಸವದಲ್ಲಿ ಪಾಲ್ಗೊಳ್ಳುವ ಭಕ್ತಾಧಿಗಳಿಗೆ ದೇವಾಲಯದ ಅಭಿವೃದ್ಧಿ ಸಮಿತಿಯ ಒಡಗೂಡಿ ಗ್ರಾಮದ ಯುವಕರು ಪಾನಕ ಫಲಹಾರವನ್ನು ವಿತರಿಸಿದರು ಇದರೊಂದಿಗೆ ಕಳೆದ ನಾಲ್ಕು ದಿನಗಳಿಂದ ನಡೆಯುತ್ತಿದ್ದ ಯಳವಾರೆ ಅಮ್ಮನ ಜಾತ್ರಾ ಮಹೋತ್ಸವವು ವಿಜೃಂಭಣೆಯಿಂದ ಸಂಪನ್ನಗೊಂಡಿತು.

ರಥೋತ್ಸವದ ಸಂದರ್ಭದಲ್ಲಿ ರಾಜ್ಯಗೃಹ ಮಂಡಳಿಯ ಅಧ್ಯಕ್ಷರಾದ ಶಾಸಕ ಕೆ.ಎಂ. ಶಿವಲಿಂಗೇಗೌಡ ಸೇರಿದಂತೆ ನಾನಾ ರಾಜಕೀಯ ಪಕ್ಷಗಳ ಮುಖಂಡರು ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ದೇವಾಲಯದ ಅಭಿವೃದ್ಧಿ ಸಮಿತಿಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ಪ್ರತಿಪ್ರಜೆಯೂ ಜನಗಣತಿಗೆ ಒಳಪಡಬೇಕು

• ಪ್ರಜೋದಯ ವರದಿ

**ಹೊಳೆನರಸೀಪುರ:** ಆಯಾ ಪ್ರದೇಶಗಳ ಜನ ಸಂಖ್ಯೆ ಅನುಗುಣವಾಗಿಯೇ ಹತ್ತಾರು ಯೋಜನೆ ಮತ್ತು ಅಭಿವೃದ್ದಿ ಕೈಗೊಳ್ಳಬೇಕಿರುವ ಕಾರಣ ಜನಗಣತಿ ಕಾರ್ಯ ಪ್ರಮುಖವಾಗಿದೆ ಎಂದು ಸಂಸದ ಶ್ರೇಯಸ್ ಎಂ.ಪಟೇಲ್ ತಿಳಿಸಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನಲ್ಲಿ ಕಂದಾಯ ಇಲಾಖೆ ಜನಗಣತಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿ, ಭಾರತೀಯ ದೇಶದ ಪ್ರತಿಯೊಬ್ಬ ಪ್ರಜೆಯೂ ಜನಗಣತಿಗೆ ಒಳಪಡಬೇಕು. ನಿಖರ ಮಾಹಿತಿ ನೀಡುವ ಮೂಲಕ ದೇಶದ ಪ್ರಗತಿಗೆ ಪೂರಕವಾಗಬೇಕು. ಶಿಕ್ಷಕರು ಸಮಾಜದಲ್ಲಿನ ಅತಿಮುಖ್ಯ ನಿರ್ಮಾತರು. ಜನಗಣತಿ ಕಾಯಕ ನಡೆಸಿರುವ ಶಿಕ್ಷಕ ವರ್ಗ ಯಶಸ್ವಿಯಾಗಿ ನಿಭಾಯಿಸುವರು ಎಂಬ ಭರವಸೆ ಇದೆ. ಸರಕಾರ ಜನಗಣತಿದಾರ ಶಿಕ್ಷಕರು ಮತ್ತು ಅಧಿಕಾರಿ ವರ್ಗಕ್ಕೆ ಎಲ್ಲ ಸವಲತ್ತು ನೀಡಲು ಸಿದ್ದವಿದೆ ಎಂದು ತಿಳಿಸಿದರು.



ತಹಸೀಲ್ದಾರ್ ವೈ.ಎಂ.ರೇಣುಕುಮಾರ್ ಮಾತನಾಡಿ, ತಾಲ್ಲೂಕಿನ ವ್ಯಾಪ್ತಿಯನ್ನು 334 ಬ್ಲಾಕ್‌ಗಳನ್ನಾಗಿ ವಿಂಗಡಿಸಲಾಗಿದೆ. ಗಣತಿ ಕಾರ್ಯದಲ್ಲಿ ತೊಡಗುವ ಗಣತಿದಾರರಿಗೆ ತಲಾ 2 ಬ್ಲಾಕ್‌ನಂತೆ ವಹಿಸಲಾಗಿದೆ. 297 ಇನ್ ವರ್ಟರ್‌ಗಳು, 57 ಮಂದಿ ಮೇಲ್ವಿಚಾರಕರು ಕಾರ್ಯ ನಿರ್ವಹಿಸಲಿದ್ದಾರೆ. ಮೂರು ದಿನಗಳ ಕಾಲ ತರಬೇತಿ ಕಾರ್ಯಾಗಾರ ನಡೆಸಲಾಗುತ್ತಿದೆ ಎಂದು ಹೇಳಿದರು.

ಜೆಎಂಎಫ್‌ಸಿ ಸಿವಿಲ್ ನ್ಯಾಯಾಧೀಶೆ ಚೇತನಾ ಸ್ವಯಂ ಜನಗಣತಿ ಪಟ್ಟಿಯಲ್ಲಿ ದೃಡೀಕರಿಸಿಕೊಂಡರು. ಬಿಇಒ ಸೋಮಲಿಂಗೇಗೌಡ ಇದ್ದರು.

# ಕಸಾಪ: ಸಂಘಟನಾ ಚಾತುರ್ಯ ವ್ಯಕ್ತಿಯ ಆಯ್ಕೆ ಮಾಡಿ

## ಕಾಳೇನಹಳ್ಳಿ ಆನಂದ್ ಹಿತೈಷಿಗಳ ಚಿಂತನಾ ಸಭೆಯಲ್ಲಿ ಮೇಟಿಕೆರೆ ಹಿರಿಯಣ್ಣ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಕನ್ನಡ ಸಾಹಿತ್ಯ ಪರಿಷತ್ತು ಕನ್ನಡಿಗರ ಅಸ್ಮಿತೆಯ ಧ್ವನಿಯಾಗಿದ್ದು, ಇಂತಹ ಜಾಗಕ್ಕೆ ಕನ್ನಡ ಮನಸ್ಸುಗಳನ್ನು ಸೆಳೆಯುವ ಸಂಘಟನಾ ಚಾತುರ್ಯ ಇರುವ ಹೋರಾಟದ ಹಿನ್ನೆಲೆಯಿಂದ ಬಂದಂತವರು ಜಿಲ್ಲಾ ಅಧ್ಯಕ್ಷರಾಗಿ ಆಯ್ಕೆಗೊಂಡರೆ ಪರಿಷತ್ ನಿಂತ ನೀರಾಗದೆ ಒಳ್ಳೆಯ ಕೆಲಸ ಮಾಡಲು ಸಾಧ್ಯವಾಗುತ್ತದೆ ಎಂದು ಹಿರಿಯ ಸಾಹಿತಿ ಮೇಟಿಕೇರಿ ಹಿರಿಯಣ್ಣ ಅಭಿಪ್ರಾಯಪಟ್ಟರು.

ಪಟ್ಟಣದ ಡಾ. ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಆಯೋಜಿಸಲಾದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಗಾದಿಗೆ ಆಕಾಂಕ್ಷಿಯಾಗಿರುವ ಸಾಮಾಜಿಕ ಹೋರಾಟಗಾರ ಕಾಳೇನಹಳ್ಳಿ ಆನಂದ್ ಅವರ ಹಿತೈಷಿಗಳ ಚಿಂತನಾ ಸಭೆ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪ್ರಸ್ತುತ ದಿನಗಳಲ್ಲಿ ಪರಿಷತ್ ಚುನಾವಣೆಗಳು ರಾಜಕೀಯ ಚುನಾವಣೆಗಳ ರೀತಿ ಹಣದ ಹೊಳೆಯನ್ನು ಹರಿಸುವ ಮಟ್ಟಕ್ಕೆ ಬಂದಿರುವುದು ಬೇಸರದ ಸಂಗತಿ. ಕನ್ನಡ ಸಾಹಿತ್ಯ ಪರಿಷತ್ತು ಎಂದರೆ ಕನ್ನಡ ನಾಡು, ನುಡಿಗೆ ಸೇವೆ ಸಲ್ಲಿಸುವ ತುಡಿತ ಇರುವ ವ್ಯಕ್ತಿಯನ್ನು ಆರಿಸಿ ಕಳಿಸುವಂತಹ ಒಂದು ವ್ಯವಸ್ಥೆ ಆದರೆ ಇಂದು ಉದ್ಯಮಿಗಳು ರಾಜ ಕೀಯ ಹಿನ್ನಡೆಯುಳ್ಳವರು ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುತ್ತಿದ್ದು, ಚುನಾವಣೆಗಳಲ್ಲಿ ನಿಜವಾದ ಕನ್ನಡದ ಕಟ್ಟಾಳುಗಳು ಹಿಮ್ಮುಖವಾಗಲು ಕಾರಣ ಎಂದರು.



ಆನಂದ್ ಕಾಳೇನಹಳ್ಳಿ ಚಿಕ್ಕಂದಿನಿಂದಲೂ ಸಂಘಟನಾ ಚತುರತೆ ಇರುವ ವ್ಯಕ್ತಿಯಾಗಿದ್ದು ಅವರಿಗೆ ಕನ್ನಡಕ್ಕಾಗಿ ಕೆಲಸ ಮಾಡುವ ಅವಕಾಶ ಸಿಗಲಿ ಎಂದು ಹಾರೈಸಿದರು.

ಸಭೆಯಲ್ಲಿ ನಾಡಪ್ರಭು ಕೆಂಪೇಗೌಡ ವೇದಿಕೆಯ ಸಂಸ್ಥಾಪಕ ರಾಜ್ಯಾಧ್ಯಕ್ಷರು ಹಾಗೂ ಹಾಸನ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸ್ಥಾನದ ಆಕಾಂಕ್ಷಿ ಕಾಳೇನಹಳ್ಳಿ ಆನಂದ್ ಕುಮಾರ್, ಕರ್ನಾಟಕ ಸಹಕಾರ ಮಾರಾಟ ಮಂಡಳಿಯ ನಿರ್ದೇಶಕ ' ಸಿ. ಎನ್. ಪುಟ್ಟಸ್ವಾಮಿಗೌಡ, ಟಿಎಪಿಸಿಎಂಎಸ್ ಅಧ್ಯಕ್ಷ ವೆಂಕಟೇಶ್, ಮಾಜಿ ಅಧ್ಯಕ್ಷ ಕುಂಬಾರಹಳ್ಳಿ ರಮೇಶ್, ಮಾಜಿ ಉಪಾಧ್ಯಕ್ಷ ಜಗದೀಶ್, ಪುರಸಭಾ ಮಾಜಿ ಅಧ್ಯಕ್ಷ ಸಿ. ನಾಗರಾಜು, ಕೋಟೆ ಮೋಹನ್, ಪ್ರೊಫೆಸರ್ ಸಿದ್ದೇಗೌಡ, ಹೊನ್ನಶೆಟ್ಟಿಹಳ್ಳಿ ಗಿರಿರಾಜ್, ಜಯಂತಿ ಚಂದ್ರಶೇಖರ್, ಕಾಳೇನಹಳ್ಳಿ ಚಂದ್ರು, ಹರಿಕಥೆ ವಿದ್ವಾಂಸ ಲೋಕೇಶ್ ದಾಸ್, ಮಕ್ಕಳ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷ ಸಿ.ಎನ್.ಅಶೋಕ್, ನವೋದಯ ವಿದ್ಯಾ ಸಂಸ್ಥೆಯ ಅಧ್ಯಕ್ಷ ಮುರಾರ್ಜಿ ಮಂಜಣ್ಣ, ಕಾರ್ಯದರ್ಶಿ ಕೆಂಬಾಳು ಶರತ್, ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷೆ ನಾಗರತ್ನ, ಉಪಾಧ್ಯಕ್ಷೆ ಪ್ರೇಮಮ್ಮ, ಗಜಾನನ ಮನೋಹರ್, ಅಬ್ದುಲ್ ಅಝೀಮ್ ಇತರರಿದ್ದರು.

# ಪಿಯುಸಿ ಫಲಿತಾಂಶ: ಮಾಸ್ಟರ್ಸ್ ಕಾಲೇಜು ಉತ್ತಮ ಸಾಧನೆ



• ಪ್ರಜೋದಯ ವರದಿ

**ಹಾಸನ:** ಈ ಬಾರಿಯ ಪಿಯುಸಿ ಫಲಿತಾಂಶ ಪ್ರಕಟಗೊಂಡಿದ್ದು, ಪ್ರತಿವರ್ಷದಂತೆ ಮಾಸ್ಟರ್ ಪಿಯು ಕಾಲೇಜು ವಿದ್ಯಾರ್ಥಿಗಳು ಒಟ್ಟಾರೆಯಾಗಿ ಅತ್ಯುತ್ತಮ ಸಾಧನೆ ಮಾಡಿದ್ದಾರೆ.

ಕಾಲೇಜಿನ ಒಟ್ಟು 386 ವಿದ್ಯಾರ್ಥಿಗಳಲ್ಲಿ 291 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್‌ನಲ್ಲಿ ತೇರ್ಗಡೆ ಹೊಂದುವ ಮೂಲಕ ಕಾಲೇಜಿನ ಗುಣಮಟ್ಟದ ಬೋಧನೆಗೆ ಮತ್ತೊಮ್ಮೆ ಕನ್ನಡಿ ಹಿಡಿದಿದ್ದಾರೆ. ಉಳಿದಂತೆ 92 ವಿದ್ಯಾರ್ಥಿಗಳು ಫಸ್ಟ್ ಕ್ಲಾಸ್, ಮೂವರು ಸೆಕೆಂಡ್ ಕ್ಲಾಸ್‌ನಲ್ಲಿ ಪಾಸಾಗಿದ್ದಾರೆ.

**ಪ್ರತಿಭಾವಂತ ವಿದ್ಯಾರ್ಥಿಗಳ ಪೈಕಿ ಗಣಿತ ವಿಷಯದಲ್ಲಿ 46 ಮಂದಿ, ಭೌತಶಾಸ್ತ್ರ-ಕಂಪ್ಯೂಟರ್ ಸೈನ್ಸ್ ವಿಷಯದಲ್ಲಿ ತಲಾ 21 ಮಂದಿ, ಸಂಸ್ಕೃತ ವಿಷಯದಲ್ಲಿ 19, ಬಯೋಲಜಿಯಲ್ಲಿ ಐವರು ಹಾಗೂ ರಸಾಯನ ಶಾಸ್ತ್ರದಲ್ಲಿ ಇಬ್ಬರು ವಿದ್ಯಾರ್ಥಿಗಳು ನೂರಕ್ಕೆ ನೂರು ಅಂಕ ಸಂಪಾದಿಸಿ ಗಮನಾರ್ಹ ಸಾಧನೆ ಮಾಡಿದ್ದಾರೆ.**

**ಸಪ್ತ ಸಾಧಕರಿವರು:** ಹಿತಶ್ರೀ ಎ.ವೈ. 600ಕ್ಕೆ 595(ಶೇ.99.17) ಅಂಕ ಪಡೆದು ಕಾಲೇಜಿಗೆ ಟಾಪರ್ ಆಗಿ ಹೊರ ಹೊಮ್ಮಿದ್ದಾರೆ. ಗಣಿತ, ಭೌತಶಾಸ್ತ್ರ ಮತ್ತು ಜೀವಶಾಸ್ತ್ರ ವಿಷಯದಲ್ಲಿ ನೂರಕ್ಕೆ ನೂರು ಅಂಕಗಳಿಸಿದ್ದಾರೆ.

ಲಕ್ಷ್ಮಿ ಬಸವರಾಜ್ ಬಿದರಕುಂಡಿ ಸಹ ಅಷ್ಟೇ ಅಂಕ ಪಡೆದಿದ್ದಾರೆ. ಸಂಸ್ಕೃತ, ಭೌತಶಾಸ್ತ್ರ,ಗಣಿತ ಮತ್ತು ಕಂಪ್ಯೂಟರ್ ಸೈನ್ಸ್ ವಿಷಯದಲ್ಲಿ ತಲಾ 100 ಅಂಕ ಪಡೆದಿದ್ದಾರೆ.

ಲಹರಿ ಹಾಗೂ ತೋಷಿತಾ ಎಂಬ ವಿದ್ಯಾರ್ಥಿನಿಯರು 600ಕ್ಕೆ 593 (ಶೇ.98.83) ಸಮ ಅಂಕಗಳನ್ನು ಪಡೆದಿದ್ದಾರೆ.

ಲಹರಿ ಭೌತಶಾಸ್ತ್ರ ಮತ್ತು ಗಣಿತ ವಿಷಯದಲ್ಲಿ ತಲಾ 100 ಅಂಕ ಪಡೆದಿದ್ದರೆ, ತೋಷಿತಾ ಭೌತಶಾಸ್ತ್ರ, ಗಣಿತ ಮತ್ತು ಜೀವಶಾಸ್ತ್ರ ವಿಷಯಗಳಲ್ಲಿ ಔಟ್ ಆಫ್ ಔಟ್ ಅಂಕ ಸಂಪಾದನೆ ಮಾಡಿದ್ದಾರೆ.

ಉಳಿದಂತೆ ನಭಾ ಒ ಗೌಡ, ನಿಸರ್ಗ ಹೆಚ್.ಜಿ ಮತ್ತು ಯುಕ್ತಶ್ರೀ ಪಿ ಮೂವರೂ 600ಕ್ಕೆ 591 (ಶೇ.98.50) ಅಂಕ ಗಳಿಸಿದ್ದಾರೆ. ಸಭಾ ಗಣಿತದಲ್ಲಿ 100ಕ್ಕೆ 100 ಅಂಕ ಪಡೆದಿದ್ದರೆ, ನಿಸರ್ಗ ಭೌತಶಾಸ್ತ್ರ ಮತ್ತು ಗಣಿತ ವಿಷಯದಲ್ಲಿ 100 ಮತ್ತು ಯುಕ್ತಶ್ರೀ ಭೌತಶಾಸ್ತ್ರ, ಗಣಿತ ಮತ್ತು ಕಂಪ್ಯೂಟರ್ ಸೈನ್ಸ್ ವಿಷಯದಲ್ಲಿ ತಲಾ ನೂರು ಅಂಕ ಪಡೆದು ಮೇರು ಸಾಧನೆ ಮಾಡಿದ್ದಾರೆ.

ಸಾಧಕ ವಿದ್ಯಾರ್ಥಿಗಳನ್ನು ಆಡಳಿತ ಮಂಡಳಿ ಹಾಗೂ ಉಪನ್ಯಾಸಕ ವರ್ಗ, ಸಿಬ್ಬಂದಿ ವರ್ಗದವರು ಹಾರ್ದಿಕವಾಗಿ ಅಭಿನಂದಿಸಿದ್ದಾರೆ.

## ಸರ್ಕಾರಿ ಕಾಲೇಜಿಗೆ ಶೇ. 90 ಫಲಿತಾಂಶ

• ಪ್ರಜೋದಯ ವರದಿ

**ಹೊಳೆನರಸೀಪುರ:** ಪಟ್ಟಣದ ಸರ್ಕಾರಿ ಪದವಿ ಪೂರ್ವ ಬಾಲಕಿಯರ ಕಾಲೇಜಿಗೆ ದ್ವಿತೀಯ ಪಿಯುಸಿ ಪರೀಕ್ಷಾ ಫಲಿತಾಂಶ ಶೇ.90 ರಷ್ಟು ಲಭ್ಯವಾಗಿದ್ದು, ವಾಣಿಜ್ಯ ವಿಭಾಗದಲ್ಲಿ ಎಚ್.ಎಸ್.ವಿದ್ಯಾ 600ಕ್ಕೆ 594 ಅಂಕ ಗಳಿಸುವ ಮೂಲಕ ಶೇ. 99 ಅಂಕ ಪಡೆದು ಉನ್ನತ ಸ್ಥಾನ ಪಡೆದುಕೊಂಡಿದ್ದಾರೆ. ವಿಜ್ಞಾನ ವಿಭಾಗದಲ್ಲಿ ಮಾನಸ ಶೇ.92 ಹಾಗೂ ಕಲಾ ವಿಭಾಗದಲ್ಲಿ ಎಚ್.ಎಂ. ಅಪೂರ್ವ ಶೇ.96 ಅಂಕ ಸಾಧಿಸಿದ್ದಾರೆ. ಉನ್ನತ ಶ್ರೇಣಿಯಲ್ಲಿ 70 ಮಂದಿ ತೇರ್ಗಡೆ ಹೊಂದಿದ್ದು, ಕಾಲೇಜಿನ ಒಟ್ಟು 249 ವಿದ್ಯಾರ್ಥಿನಿಯರು ಪರೀಕ್ಷೆ ಬರೆದಿದ್ದರು. ಇವರಲ್ಲಿ 224 ಮಂದಿ ವಿದ್ಯಾರ್ಥಿಗಳು ಪಾಸ್ ಆಗಿದ್ದಾರೆ.


## ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಸಕಲೇಶಪುರ

ಹೊಸ ಬಸ್ ನಿಲ್ದಾಣದ ಎದುರು, ಬಿ.ಎಂ ರಸ್ತೆ, ಸಕಲೇಶಪುರ-573134

Email:apmcskp_111@rediffmail.com Phone:08173-299903

ಕ್ರ.ಸಂ:ಕೃ.ಉ.ಮಾ.ಸ(ಸ):05 / 2026-27 ದಿ:06-04-2026

### ಪ್ರಕಟಣೆ

ಸಕಲೇಶಪುರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಖಾಲಿ ಇರುವ ಈ ಕೆಳಕಂಡ ಗೋದಾಮು/ಮಳಿಗೆಗಳನ್ನು ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ(ಮಾರುಕಟ್ಟೆ ಪ್ರಾಂಗಣದಲ್ಲಿ ಸ್ವತ್ತಿನ ಹಂಚಿಕೆ ನಿಯಂತ್ರಣ) ನಿಯಮ 2004ರ ನಿಯಮ 13 ಮತ್ತು 14ರನ್ವಯ ಪ್ರತಿ 11 ತಿಂಗಳಿಗೊಮ್ಮೆ ನವೀಕರಿಸಿ, ಪ್ರತಿ 33 ತಿಂಗಳಿಗೆ ಶೇ 5 ರಷ್ಟು ಲೀವ್ ಅಂಡ್ ಲೈಸೆನ್ಸ್ ಶುಲ್ಕ ಹೆಚ್ಚಿಸಿ ಗರಿಷ್ಠ 55 ತಿಂಗಳ ಅವಧಿಗೆ ಲೀವ್ & ಲೈಸೆನ್ಸ್ ಶುಲ್ಕದ ಆಧಾರದ ಮೇಲೆ ಹಂಚಿಕೆ ಮಾಡಲು ಅರ್ಹ ಲೈಸೆನ್ಸ್ ಪಡೆದ ವರ್ತಕರು ಮತ್ತು ಸಾರ್ವಜನಿಕರಿಂದ ಈ ಕೆಳಕಂಡ ಷರತ್ತು-ವ-ನಿಬಂಧನೆಗೊಳಪಟ್ಟು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಗೋದಾಮು/ಅಂಗಡಿ ಮಳಿಗೆ ಪಡೆಯಲು ಇಚ್ಛಿಸುವವರು ಸಮಿತಿಯಲ್ಲಿ ನೋಂದಣಿ ಶುಲ್ಕ ಪಾವತಿಸಿ, ನೋಂದಾಯಿಸಿಕೊಂಡು ನಂತರ ಅರ್ಜಿ ಸಲ್ಲಿಸುವುದು. ಕಟ್ಟಡದ ವಿವರ ಈ ಕೆಳಗಿನಂತಿರುತ್ತದೆ.

ನಿಯಮ13ರಡಿ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಖಾಲಿ ಇರುವ ಗೋದಾಮು/ಮಳಿಗೆಗಳ ವಿವರ

| ಕ್ರ.ಸಂ | ಕಟ್ಟಡಗಳ ವಿವರ | ನಿಗಧಿಪಡಿಸಿರುವ ಲೀವ್ ಅಂಡ್ ಲೈಸೆನ್ಸ್ ಶುಲ್ಕ (ಮಾಸಿಕ. ರೂ.ಗಳಲ್ಲಿ) (ತೆರಿಗೆ ಪ್ರತ್ಯೇಕ) | ಪಾವತಿಸಬೇಕಾದ ಮುಂಗಡ ಹಣ |
|---|---|---|---|
| 1 | ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ಸಣ್ಣ ಅಂಗಡಿ ಮಳಿಗೆ ಸಂಖ್ಯೆಗಳು 05(01, 03, 05, 06, 07) | 2,451-00 | 5,000-00 |
| 2 | ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ಎನ್.ಜಿ.ಆರ್.ಜಿ. ಗೋದಾಮು ಗಳು 03 ಸಂಖ್ಯೆ ( 01, 03 ಮತ್ತು 04) | 10,560-00 | 21,120-00 |

ಮೀಸಲಾತಿ ವಿವರ ಮತ್ತು ಮಳಿಗೆಗಳ ಸಂಖ್ಯೆ ಎನ್.ಜಿ.ಆರ್.ಜಿ ಗೋದಾಮು ಸಂಖ್ಯೆ04ನ್ನು ಪರಿಶಿಷ್ಠ ಜಾತಿಗೆ, ಸಣ್ಣ ಅಂಗಡಿ ಮಳಿಗೆ ಸಂಖ್ಯೆ05ನ್ನು ಪರಿಶಿಷ್ಠ ಪಂಗಡಕ್ಕೆ, ಎನ್.ಜಿ.ಆರ್.ಜಿ ಗೋದಾಮು ಸಂಖ್ಯೆ 01ನ್ನು ಸಾಮಾನ್ಯ ಮಹಿಳೆಗೆ ಮೀಸಲಿರಿಸಲಾಗಿದ್ದು, ಸಣ್ಣ ಅಂಗಡಿ ಮಳಿಗೆ ಸಂಖ್ಯೆ 01, 03, 06, 07 ಮತ್ತು ಎನ್.ಜಿ.ಆರ್.ಜಿ ಗೋದಾಮು ಸಂಖ್ಯೆ 03ನ್ನು ಸಾಮಾನ್ಯ ವರ್ಗಕ್ಕೆ ಮೀಸಲಿರಿಸಿದೆ.

ನಿಯಮ14ರಡಿ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಖಾಲಿ ಇರುವ ಮಳಿಗೆ/ಗೋದಾಮುಗಳ ಟೆಂಡರ್-ಕಂ-ಬಹಿರಂಗ ಹರಾಜು

| ಕ್ರ.ಸಂ | ಕಟ್ಟಡಗಳ ವಿವರ | ನಿಗಧಿಪಡಿಸಿರುವ ಲೀವ್ ಅಂಡ್ ಲೈಸೆನ್ಸ್ ಶುಲ್ಕ (ಮಾಸಿಕ. ರೂ.ಗಳಲ್ಲಿ) (ತೆರಿಗೆ ಪ್ರತ್ಯೇಕ) | ಪಾವತಿಸಬೇಕಾದ ಮುಂಗಡ ಹಣ |
|---|---|---|---|
| 3 | ಕಾಂಪೌಂಡ್ ಹೊರಗಿನ ಪೂರ್ವಭಾಗದ ತೆರೆದ ಹರಾಜು ಕಟ್ಟೆಯ ಮೇಲೆ ಹೊಸದಾಗಿ ನಿರ್ಮಾಣಗೊಂಡಿರುವ ಸಣ್ಣ ಅಂಗಡಿ ಮಳಿಗೆ ಸಂಖ್ಯೆಗಳು 5 | | |
| | ಸಣ್ಣ ಅಂಗಡಿ ಮಳಿಗೆ ಸಂಖ್ಯೆ - 01 | 1,800-00 | 5,000-00 |
| | ಸಣ್ಣ ಅಂಗಡಿ ಮಳಿಗೆ ಸಂಖ್ಯೆ - 02 | 2,420-00 | 5,000-00 |
| | ಸಣ್ಣ ಅಂಗಡಿ ಮಳಿಗೆ ಸಂಖ್ಯೆ - 04 | 3,440-00 | 6,880-00 |
| | ಸಣ್ಣ ಅಂಗಡಿ ಮಳಿಗೆ ಸಂಖ್ಯೆ - 05 | 4,010-00 | 8,020-00 |
| | ಸಣ್ಣ ಅಂಗಡಿ ಮಳಿಗೆ ಸಂಖ್ಯೆ - 07 | 6,740-00 | 13,480-00 |
| 4 | ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ಕ್ಯಾಂಟೀನ್ ಕಟ್ಟಡ ಮತ್ತು ವಾಣಿಜ್ಯ ಕಟ್ಟಡದಲ್ಲಿರುವ ಅಂಗಡಿ ಮಳಿಗೆ | 2,079-00 | 5,000-00 |
| | ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಬಿ.ಎಂ ರಸ್ತೆಗೆ ಅಭಿಮುಖವಾಗಿರುವ ಅಂಗಡಿ-ವಾ-ಗೋದಾಮುಗಳು-04 ಸಂಖ್ಯೆ | | |
| | ಅಂಗಡಿ-ವಾ-ಗೋದಾಮು ಸಂಖ್ಯೆ-04 | 14,720-00 | 29,440-00 |
| | ಅಂಗಡಿ-ವಾ-ಗೋದಾಮು ಸಂಖ್ಯೆ-05 | 14,720-00 | 29,440-00 |
| | ಅಂಗಡಿ-ವಾ-ಗೋದಾಮು ಸಂಖ್ಯೆ-07 | 14,720-00 | 29,440-00 |
| | ಅಂಗಡಿ-ವಾ-ಗೋದಾಮು ಸಂಖ್ಯೆ-09 | 14,720-00 | 29,440-00 |


ಮೀಸಲಾತಿ ವಿವರ ಮತ್ತು ಮಳಿಗೆಗಳ ಸಂಖ್ಯೆ ಅಂಗಡಿ-ವಾ-ಗೋದಾಮು ಸಂಖ್ಯೆ 05 ಹಾಗೂ ಸಣ್ಣ ಅಂಗಡಿ ಮಳಿಗೆ ಸಂಖ್ಯೆ 01ನ್ನು ಪರಿಶಿಷ್ಠ ಜಾತಿಗೆ, ಸಣ್ಣ ಅಂಗಡಿ ಮಳಿಗೆ ಸಂಖ್ಯೆ04ನ್ನು ಪರಿಶಿಷ್ಠ ಪಂಗಡಕ್ಕೆ, ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ಕ್ಯಾಂಟೀನ್ ಕಟ್ಟಡ ಮತ್ತು ವಾಣಿಜ್ಯ ಕಟ್ಟಡದಲ್ಲಿರುವ ಅಂಗಡಿ ಮಳಿಗೆಯನ್ನು ಎಫ್.ಪಿ.ಓಗೆ, ಸಣ್ಣ ಅಂಗಡಿ ಮಳಿಗೆ ಸಂಖ್ಯೆ05ನ್ನು ಸಾಮಾನ್ಯ ಮಹಿಳೆಗೆ ಮೀಸಲಿರಿಸಲಾಗಿದ್ದು, ಸಣ್ಣ ಅಂಗಡಿ ಮಳಿಗೆ ಸಂಖ್ಯೆ 02, 07 ಮತ್ತು ಅಂಗಡಿ-ವಾ-ಗೋದಾಮು ಸಂಖ್ಯೆ 04,07, ಮತ್ತು 09ನ್ನು ಸಾಮಾನ್ಯ ವರ್ಗಕ್ಕೆ ಮೀಸಲಿರಿಸಿದೆ. ನೊಂದಣಿ ಕಡೆ ದಿನಾಂಕ : 22-04-2026 ಸಂಜೆ 4.30 ಘಂಟೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 23-04-2026 ಸಂಜೆ 05.00 ಘಂಟೆ ಟೆಂಡರ್-ಕಂ-ಬಹಿರಂಗ ಹರಾಜು : 24-04-2026 ಪೂರ್ವಾಹ್ನ 11.30 ಘಂಟೆ ಷರತ್ತು-ವ-ನಿಬಂಧನೆಗಳಿಗಾಗಿ ಹಾಗೂ ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸತಕ್ಕದ್ದು. ಇಮೇಲ್‌ವಿಳಾಸ: apmcskp_111@rediffmail.com, ದೂರವಾಣಿ ಸಂಖ್ಯೆ 08173-299903, ಮೊಬೈಲ್ ನಂ:9742924266

ಸಹಿ/- ಆಡಳಿತಾಧಿಕಾರಿ, ಕೃ,ಉ,ಮಾ.ಸ, ಸಕಲೇಶಪುರ

ಸಹಿ/- ಕಾರ್ಯದರ್ಶಿ ಕೃ,ಉ,ಮಾ.ಸ, ಸಕಲೇಶಪುರ

ವಾಸಾಸಂಇ/ಹಿಸನಿ/ಹಾಸನ/21/ಕೆಎಸ್‌ಎಂಸಿಎ/2026-27


# ಹಿರಿಯ ಪತ್ರಕರ್ತ ಅಣ್ಣಯ್ಯ ನಿಧನ



**ಅರಕಲಗೂಡು:** ತಾಲ್ಲೂಕು ಕಾರ್ಯ ನಿರತ ಪತ್ರಕರ್ತರ ಸಂಘದ ಪ್ರಥಮ ಅಧ್ಯಕ್ಷರಾಗಿದ್ದ ಎನ್. ಅಣ್ಣಯ್ಯ (82) ಅವರು ಅನಾರೋಗ್ಯದಿಂದ ನಿಧನರಾಗಿದ್ದಾರೆ.

ಪೇಪರ್ ಅಣ್ಣಯ್ಯ ಎಂದು ಖ್ಯಾತಿ ಯಾಗಿದ್ದ ಇವರು ಗುರುವಾರ ಬೆಳಗ್ಗೆ 11:30 ಗಂಟೆಗೆ ದೈವಾಧೀನರಾದರು.

ಕುಂಚಿಟಿಗ ಜನಾಂಗದ ಹಿರಿಯ ಮುಖಂಡರು, ತಾಲ್ಲೂಕು ಕಾರ್ಯ ನಿರತ ಪತ್ರಕರ್ತರ ಸಂಘದ ಮೊದಲ ಅಧ್ಯಕ್ಷರಾಗಿ, ಕೊಣನೂರು ಗ್ರಾಮಾಂತರ ರಾಷ್ಟ್ರೀಯ ವಿದ್ಯಾಸಂಸ್ಥೆಯ ನಿಕಟ ಪೂರ್ವ ಕಾರ್ಯದರ್ಶಿಯಾಗಿ, ಕೊಣನೂರು ಪುರಸಭೆ ಮಾಜಿ ಉಪಾಧ್ಯಕ್ಷರಾಗಿ ಹಾಗೂ ಪ್ರಜಾವಾಣಿ ಪತ್ರಿಕೆಯ ವರದಿಗಾರರು ಮತ್ತು ವಿತರಕರಾಗಿ ಸೇವೆ ಸಲ್ಲಿಸಿದ್ದಾರೆ. ಅಣ್ಣಯ್ಯನವರ ನಿಧನಕ್ಕೆ ಅರಕಲಗೂಡು ತಾಲೂಕು ಹಾಗೂ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ ಸಂತಾಪ ಸೂಚಿಸಿದೆ.

# ಜನಸ್ಪಂದನಾ ಸಭೆ: ಹಳ್ಳಿಗಳಿಗೆ ಡಂಗುರದ ಮೂಲಕ ಪ್ರಚಾರ ನೀಡಿ

**ಬೇಲೂರು:** ತಾಲ್ಲೂಕು ಕಚೇರಿ ಅವರಣದಲ್ಲಿ ಏ.10ರ ಶುಕ್ರವಾರ ಬೆಳಿಗ್ಗೆ 9 ಗಂಟೆಯಿಂದ ಜಿಲ್ಲಾ ಸಚಿವ ಕೃಷ್ಣಬೈರೇಗೌಡ ಅವರ ನೇತೃತ್ವದಲ್ಲಿ ನಡೆಯುವ ಜನಸ್ಪಂದನಾ ಸಭೆ ಹಾಗೂ ಸಾರ್ವಜನಿಕರ ಕುಂದು-ಕೊರತೆ ಸಭೆಗೆ ಕಡ್ಡಾಯವಾಗಿ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿ ಗಳು ಭಾಗವಹಿಸಬೇಕು ಮತ್ತು ಸಾರ್ವಜನಿಕರು ಹೆಚ್ಚಾಗಿ ಆಗಮಿಸಲು ಹಳ್ಳಿ-ಹಳ್ಳಿಗೆ ಡಂಗುರದ ಮೂಲಕ ವ್ಯಾಪಕ ಪ್ರಚಾರ ನೀಡಬೇಕು ಎಂದು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.



ಪಟ್ಟಣದ ನೆಹರುನಗರ ತಾಲ್ಲೂಕು ಕಚೇರಿ ಬಳಿ ನಡೆಯುವ ಜಿಲ್ಲಾ ಮಂತ್ರಿಗಳ ಜನಸ್ಪಂದನಾ ಸಭೆಯ ಬಗ್ಗೆ ಸಂಬಂಧ ಪಟ್ಟ ಅಧಿಕಾರಿಗಳಿಂದ ಮಾಹಿತಿ ಹಾಗೂ ಸ್ಥಳ ಪರಿಶೀಲನೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಂದಾಯ ಮಂತ್ರಿಗಳ ಮೂರನೇ ಜಿಲ್ಲಾ ಮಟ್ಟದ ಜನಸ್ಪಂದನಾ ಸಭೆಗೆ ಜಿಲ್ಲಾಡಳಿತ ಮತ್ತು ತಾಲ್ಲೂಕು ಆಡಳಿತ ಸಕಲ ಸಿದ್ದತೆಯನ್ನು ಮಾಡಿಕೊಂಡಿದೆ. ಸಾರ್ವಜನಿಕರು ಮುಕ್ತವಾಗಿ ಸಚಿವರ ಬಳಿ ಸಮಸ್ಯೆಗಳ ಅರ್ಜಿಗಳನ್ನು ನೀಡಿ ಮಾಹಿತಿ ಪಡೆಯಲು ಸಕಲ ವ್ಯವಸ್ಥೆ ಕಲ್ಪಿಸಿದೆ. ಪ್ರತಿಯೊಂದು ಇಲಾಖೆ ತಮ್ಮ ತಮ್ಮ ಜವಾಬ್ದಾರಿಯನ್ನು ಅತ್ಯಂತ ನಿಷ್ಠೆಯಿಂದ ನಿರ್ವಹಿಸಲು ಬದ್ದರಾಗಬೇಕಿದೆ. ಈಗಾಗಲೇ ಬೇಸಿಗೆ ಬಿಸಲು ಹೆಚ್ಚಾಗಿರುವ ಕಾರಣ ದಿಂದ ಶಾಮಿಯಾನ ಮತ್ತು ಕುಡಿಯುವ ನೀರು, ಆರೋಗ್ಯ ಇಲಾಖೆ ಯಿಂದ ತುರ್ತುವಾಹನ, ಅಗ್ನಿ ಶಾಮಕ ದಳ ಮತ್ತು ಉಚಿತ ಆರೋಗ್ಯ ತಪಾಸಣೆ ಸೇರಿ ಪ್ರಸಕ್ತ ದಿನದಲ್ಲಿನ ಜನಗಣತಿ ಕೌಂಟರ್ ಕೂಡ ನಿರ್ಮಿಸಲು ಜಿಲ್ಲಾ ಡಳಿತ ಮುಂದಾಗಿದೆ. ಸಾರ್ವಜನಿಕರು ತಾಳ್ಮೆಯಿಂದ ಅರ್ಜಿಗಳನ್ನು ಮದ್ಯ ವರ್ತಿಗಳ ಸಹಾಯವಿಲ್ಲದೆ ನೇರ ಸಚಿವರನ್ನು ಭೇಟಿಯ ಅವಕಾಶವನ್ನು ಸದ್ಬಳಿಕೆ ಮಾಡಿಕೊಳ್ಳಬೇಕೆಂದುಸಲಹೆ ನೀಡಿದರು.

ಕಂದಾಯ ಸಚಿವರ ಜನಸ್ಪಂದನಾ ಸಭೆ ಅರ್ಥಪೂರ್ಣವಾಗಬೇಕು ಎಂಬ ಹಿನ್ನಲೆಯಲ್ಲಿ ಕಾರ್ಮಿಕ ಇಲಾಖೆ ಯಿಂದ ಇ-ಶ್ರಮ್ ಕಾರ್ಡ್ ವಿತರಣೆ, ತೋಟಗಾರಿಕೆ ಮತ್ತು ಕೃಷಿ ಇಲಾಖೆಯಿಂದ ಅರ್ಹ ಫಲಾನು ಭವಿಗಳಿಗೆ ಸವಲತ್ತುಗಳ ವಿತರಣೆ, ಪುರಸಭೆ, ಪಂಚಾಯತ್ ರಾಜ್ ಸೇರಿ ಹತ್ತಾರು ಇಲಾಖೆಗಳು ಈ ಸಂದರ್ಭದಲ್ಲಿ ಭಾಗಿಯಾಗಲಿವೆ. ಸಾರ್ವಜನಿಕರು ತಮ್ಮ ಅರ್ಜಿಗಳನ್ನು ಪ್ರವೇಶದ್ವಾರದಲ್ಲಿ ಅರ್ಜಿ ಟೋಕನ್ ಪಡೆದು ಕುಳಿತುಕೊಳ್ಳಬೇಕು ಬಳಿಕ ಅವರನ್ನು ನೇರವಾಗಿ ಕರೆಯ ಲಾಗುತ್ತದೆ. ಈಗಾಗಲೇ ಕಂದಾಯ ಮತ್ತು ಇನ್ನಿತರ ಇಲಾಖೆಯ ಸಮಸ್ಯೆಗಳ ಬಗ್ಗೆ ಜಿಲ್ಲಾಡಳಿತ ತೀವ್ರವಾಗಿ ಗಮನ ಹರಿಸಿದ್ದು ಅದರೂ ಸಚಿವರ ಸಮುಖದಲ್ಲಿ ಬರುವ ಅರ್ಜಿಗಳಿಗೆ ಸೂಕ್ತ ಉತ್ತರ ನೀಡಲು ಎಲ್ಲಾ ಇಲಾಖೆಯ ಅಧಿಕಾರಿಗಳು ಹಾಜರಿ ಕಡ್ಡಾಯವಾಗಿರುತ್ತದೆ. ವಿಶೇಷವಾಗಿ ಪೊಲೀಸ್ ಇಲಾಖೆ ಸೂಕ್ತ ಭದ್ರತೆ ಒದಗಿಸಲು ವ್ಯವಸ್ಥೆ ಮಾಡಿದ್ದಾರೆ ಎಂದು ತಿಳಿಸಿದರು.

## ಇಂತಹ ಶಿಬಿರಗಳು ಆರೋಗ್ಯ ಸ್ಥಿತಿ ಅರಿಯಲು - ತಕ್ಷಣ ಚಿಕಿತ್ಸೆ ಪಡೆಯಲು ಉತ್ತಮ ಅವಕಾಶ

# ಪೌರಕಾರ್ಮಿಕರು, ಪಾಲಿಕೆ ಸಿಬ್ಬಂದಿಗೆ ಆರೋಗ್ಯ ತಪಾಸಣೆ

• ಪ್ರಜೋದಯ ವರದಿ

**ಹಾಸನ:** ವಿಶ್ವ ಆರೋಗ್ಯ ದಿನಾಚರಣೆ ಅಂಗವಾಗಿ ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಮಹಾನಗರ ಪಾಲಿಕೆ ವತಿಯಿಂದ ಪಾಲಿಕೆ ಸಿಬ್ಬಂದಿ ಹಾಗು ಪೌರಕಾರ್ಮಿಕರಿಗಾಗಿ ಆರೋಗ್ಯ ತಪಾಸಣಾ ಉಚಿತ ಶಿಬಿರ ನಡೆಸಲಾಯಿತು. ಶಿಬಿರದಲ್ಲಿ 156ಕ್ಕೂ ಹೆಚ್ಚು ಜನರು ಭಾಗವಹಿಸಿ ಸದುಪಯೋಗ ಪಡೆದುಕೊಂಡರು.

ಶಿಬಿರದಲ್ಲಿ ವಿವಿಧ ವೈದ್ಯಕೀಯ ಸಂಸ್ಥೆಗಳ ಸಹಯೋಗದಲ್ಲಿ ಹಲವು ತಪಾಸಣೆಗಳನ್ನು ನಡೆಸಲಾಯಿತು. ವಿ ಕೇರ್ ಆಸ್ಪತ್ರೆ ವತಿಯಿಂದ ದಂತ ತಪಾಸಣೆ, ಸುನಂದ ಸೂಪರ್ ಸ್ಪೆಷಾಲಿಟಿ ಕಣ್ಣಿನ ಆಸ್ಪತ್ರೆ ವತಿಯಿಂದ ನೇತ್ರ ತಪಾಸಣೆ, ಹಾಸನ ರಕ್ತನಿಧಿ ಕೇಂದ್ರದಿಂದ ರಕ್ತ ಗುಂಪು ಪರೀಕ್ಷೆ ಹಾಗು ಹಿಮೋಗ್ಲೋಬಿನ್ ತಪಾಸಣೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಎನ್‌ಸಿಡಿ ತಂಡದಿಂದ ಬಿಪಿ ಮತ್ತು ಶುಗರ್ ತಪಾಸಣೆ, ಡಾ. ಚಂದನ್ ಅವರಿಂದ ಸಾಮಾನ್ಯ ಕಾಯಿಲೆಗಳ ತಪಾಸಣೆ ನಡೆಯಿತು.




ಮಹಾನಗರ ಪಾಲಿಕೆ ಆಯುಕ್ತ ಕೃಷ್ಣಮೂರ್ತಿ ಅವರು ಮಾತನಾಡಿ, ಸಿಬ್ಬಂದಿ ದಿನನಿತ್ಯದ ಕೆಲಸದ ಒತ್ತಡ ಮತ್ತು ಅನಿಯಮಿತ ಜೀವನಶೈಲಿ ಯಿಂದ ತಮ್ಮ ಆರೋಗ್ಯದ ಕಡೆ ಸಾಕಷ್ಟು ಗಮನ ಹರಿಸಲು ಸಾಧ್ಯ ವಾಗುತ್ತಿಲ್ಲ. ಇಂತಹ ಶಿಬಿರಗಳು ಅವರ ಆರೋಗ್ಯ ಸ್ಥಿತಿಯನ್ನು ಅರಿಯಲು ಹಾಗು ತಕ್ಷಣ ಚಿಕಿತ್ಸೆ ಪಡೆಯಲು ಉತ್ತಮ ಅವಕಾಶ ಒದಗಿಸುತ್ತವೆ ಎಂದು ತಿಳಿಸಿದರು.

ರೆಡ್ ಕ್ರಾಸ್ ಸಂಸ್ಥೆ ಉಪಸಭಾಪತಿ ಡಾ.ವೈ.ಎಸ್.ವೀರಭದ್ರಪ್ಪ ಅವರು ಮಾತನಾಡಿ, ಪ್ರತಿಯೊಬ್ಬರೂ ತಮ್ಮ ವೈಯಕ್ತಿಕ ಆರೋಗ್ಯದ ಜೊತೆಗೆ ಕುಟುಂಬದ ಆರೋಗ್ಯದ ಮೇಲೂ ಸಮಾನ ಕಾಳಜಿ ವಹಿಸಬೇಕು. ಸಣ್ಣ ಸಮಸ್ಯೆಗಳನ್ನೂ ನಿರ್ಲಕ್ಷಿಸದೆ ಸಮಯಕ್ಕೆ ತಕ್ಕಂತೆ ತಪಾಸಣೆ ಮಾಡಿಸಿಕೊಂಡರೆ ದೊಡ್ಡ ಕಾಯಿಲೆಗಳನ್ನು ತಡೆಯಬಹುದು. ರೆಡ್ ಕ್ರಾಸ್ ಸಂಸ್ಥೆ ಸದಾ ಜನಸೇವೆಗೆ ಬದ್ಧವಾಗಿದೆ ಎಂದು ಹೇಳಿದರು.

ರೆಡ್ ಕ್ರಾಸ್ ಸಂಸ್ಥೆಯ ಉಪಸಭಾ ಪತಿಗಳಾದ ಉದಯ್‌ಕುಮಾರ್, ಹಾಗೂ ಮಹಾನಗರ ಪಾಲಿಕೆ ಇಂಜಿನೀಯರ್ ಸತ್ಯನಾರಾಯಣ್ ರವರು ಪ್ರತಿಯೊಬ್ಬರೂ ತಮ್ಮ ವೈಯಕ್ತಿಕ ಆರೋಗ್ಯದ ಜೊತೆಗೆ ಕುಟುಂಬದ ಆರೋಗ್ಯದ ಮೇಲೂ ಸಮಾನ ಕಾಳಜಿ ವಹಿಸಬೇಕು. ಸಣ್ಣ ಸಮಸ್ಯೆಗಳನ್ನೂ ನಿರ್ಲಕ್ಷಿಸದೆ ಸಮಯಕ್ಕೆ ತಕ್ಕಂತೆ ತಪಾಸಣೆ ಮಾಡಿಸಿಕೊಂಡರೆ ದೊಡ್ಡ ಕಾಯಿಲೆಗಳನ್ನು ತಡೆಯಬಹುದು ಎಂದು ತಿಳಿಸಿದರಲ್ಲದೆ, ಈ ನಿಟ್ಟಿನಲ್ಲಿ ರೆಡ್ ಕ್ರಾಸ್ ಸಂಸ್ಥೆ ಸದಾ ಜನಸೇವೆಗೆ ಸಜ್ಜಾಗಿದೆ ಎಂದು ಹೇಳಿದರು.

ಈ ಶಿಬಿರದಲ್ಲಿ ವಿ ಕೇರ್ ಆಸ್ಪತ್ರೆ ವತಿಯಿಂದ ದಂತ ತಪಾಸಣೆ, ಸುನಂದ ಸೂಪರ್ ಸ್ಪೆಷಾಲಿಟಿ ಕಣ್ಣಿನ ಆಸ್ಪತ್ರೆ ವತಿಯಿಂದ ನೇತ್ರ ತಪಾಸಣೆ, ಹಾಸನ ರಕ್ತನಿಧಿ ಕೇಂದ್ರದ ವತಿ ಯಿಂದ ರಕ್ತ ಗುಂಪು ಪರೀಕ್ಷೆ, ಹಿಮೋ ಗ್ಲೋಬಿನ್ ತಪಾಸಣೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಏನ್ ಸಿ ಡಿ ತಂಡದ ವತಿಯಿಂದ ಬಿ.ಪಿ, ಶುಗರ್ ತಪಾಸಣೆ ಮತ್ತು ಡಾ. ಚಂದನ್ ರವರಿಂದ ಸಾಮಾನ್ಯ ಕಾಯಿಲೆಗಳ ತಪಾಸಣೆ ಕಾರ್ಯಕ್ರಮವನ್ನು ನಡೆಸಲಾಯಿತು.

ಈ ಶಿಬಿರದಲ್ಲಿ ಒಟ್ಟು 156ಕ್ಕೂ ಹೆಚ್ಚಿನ ಮಹಾನಗರ ಪಾಲಿಕೆ ಸಿಬ್ಬಂದಿ ವರ್ಗದವರು ಹಾಗೂ ಪೌರಕಾರ್ಮಿ ಕರು ಶಿಬಿರದಲ್ಲಿ ಭಾಗ ವಹಿಸಿ ಸದುಪ ಯೋಗ ಪಡೆದುಕೊಂಡರು.

ರೆಡ್‌ಕ್ರಾಸ್ ಸಂಸ್ಥೆ ಸಭಾಪತಿ ಹೆಮ್ಮಿಗೆ ಮೋಹನ್, ಉದಯ್ ಕುಮಾರ್, ಪಾಲಿಕೆ ಇಂಜಿನಿಯರ್ ಸತ್ಯನಾರಾಯಣ್, ಜಯೇಂದ್ರ ಕುಮಾರ್, ಅಮ್ಜದ್ ಖಾನ್, ಜಯ ಪ್ರಕಾಶ್, ಡಾ.ರಂಗಲಕ್ಷ್ಮಿ, ಭೀಮ ರಾಜ್, ಕೆ.ಟಿ.ಜಯಶ್ರೀ ಇದ್ದರು.

